ಶ್ರೀ ಬಿ. ಹುಚ್ಚೇಗೌಡರು.—ತಮಗೆ ಮೂರು ತಿಂಗಳಿಗೊಂದು ಸಲ ವರದಿ ಬರುತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬರುತ್ತಿದೆ. ಹತ್ತು ವರ್ಷದ ಲೆಕ್ಕ ನೋಡಿದರೆ ಮೂರು ವರ್ಷದಿಂದ ಇತ್ಯರ್ಥವಾಗುತ್ತಿರುವ ಅರ್ಜಿಗಳ ಸಂಖ್ಯೆ ಸೇಕಡಾವಾರು ಹೆಚ್ಚುತ್ತಿದೆಯೆಂದು ಹೇಳದೆ ವಿಧಿಯಿಲ್ಲ. ಅಧ್ಯಕ್ಷರು ಅವಕಾಶ ಕೊಟ್ಟು ಮಾನ್ಯ ಸದಸ್ಯರು ಇಷ್ಟಪಡುವುದಾದರೆ ಅದಕ್ಕೆ ಸಂಬಂಧಪಟ್ಟ ಪಟ್ಟಿಯನ್ನು ಓದಿ ಹೇಳಬಹುದು. ಸೇಕಡ 75ರಷ್ಟು ಪ್ರತಿ ಸಾಲಿನಲ್ಲಿಯೂ ಈಗ ವಿಲೇವಾರಿಯಾಗುತ್ತಿದೆ. ಹೋದ ವರ್ಷ ಬಂದ ಅರ್ಜಿ ಮತ್ತು ಹಿಂದಿನ ಸಾಲಿನಿಂದ ಮುಂದುವರೆದಿರುವ ಅರ್ಜಿ ಎಲ್ಲಾ ಸೇರಿ 29,065 ಇತ್ತು. 1948–49ರಲ್ಲಿ ವಿಲೇ ಆಗಿರುವುದು 21,989; ಇದರ ಪ್ರಕಾರ ಸೇಕಡ 75·6ರಷ್ಟು ವಿಲೇ ಆಗಿವೆ. ಈರೀತಿ ವಿಲೇವಾರಿ ಕಳೆದ ಹತ್ತು ವರ್ಷಗಳಲ್ಲಿ ಎಷ್ಟಾಗಿದೆಯೆಂಬುದನ್ನು ನಿನ್ನೆ ರಾತ್ರಿ ಹೇಳಿದೆ. ಯಾವ ವರ್ಷದಲ್ಲೂ ಕೂಡ ಇಷ್ಟು ಹೆಚ್ಚಿನ ಸಂಖ್ಯೆಯಲ್ಲಿ ವಿಲೆಯಾಗಿಲ್ಲ, ಜಮೀನುಗಳು ಸಹ ದೊರಕಿಲ್ಲ ಎಂಬುದು ನಿನ್ನೆ ಕೊಟ್ಟಿರುವ ಅಂಕಿ ಅಂಶಗಳಿಂದ ಗೊತ್ತಾಗಿದೆ. ಪುನಃ ಅದನ್ನು ಹೇಳಿ ಕಾಲಹರಣ ಮಾಡಲು ನನಗೆ ಇಷ್ಟವಿಲ್ಲ. ಕಳೆದ ವರ್ಷ 59 ಸಾವಿರ ಎಕರೆಗೆ ದರಖಾಸ್ತು ಬಂತು; ನಿಮ್ನವರ್ಗದವರಿಗೆ 12 ಸಾವಿರ ಎಕರೆ ಕೊಟ್ಟಿದೆ. ಕಳೆದ ಹತ್ತು ವರ್ಷಗಳಲ್ಲಿ ನೋಡಿದರೆ ಯಾವ ವರ್ಷದಲ್ಲೂ ಇಷ್ಟು ವಿಲೇ ಆಗಿಲ್ಲ. ಇನ್ನೂ ಹೆಚ್ಚಾಗಿ ಆಗಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹೆಚ್ಚು ಮಾಡಲು ಪ್ರಬಲಪ್ರಯತ್ನ ಮಾಡಲಾಗುತ್ತೆ ಎಂದು ಭರವಸೆ ಕೊಡುತ್ತೇನೆ. ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಆ ಸ್ಟೇಟ್‌ಮೆಂಟನ್ನು ಈ ಸಭೆಗೆ ಒದಗಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಳುಹಿಸಿ ಕೊಡುತ್ತೇನೆ.

Sri B. HUTCHE GOWDA.—I seek the leave of the House to withdraw the cut motion.

The cut motion was, by leave of the Assembly, withdrawn.

Mr. SPEAKER.—The question is :

"That a sum not exceeding Rs. 25,21,000 be granted to the Government to defray the charges which will come in course of payment during the year ending 31st day of March 1952 in respect of 'Land Revenue'."

The motion was adopted.

Mr. SPEAKER.—Next demand.

DEMAND No. 2—STATE EXCISE

8. State Excise Duties.

*The Hon'ble Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move :

"That a sum not exceeding Rs. 16,90,000 be granted to the Government to defray the charges which will come in course of payment during the year ending 31st day of March 1952, in respect of 'State Excise'."

Mr. SPEAKER.—Motion moved :

"That a sum not exceeding Rs. 16,90,000 be granted to the Government to defray the charges which will come in course of payment during the year ending 31st day of March 1952, in respect of 'State Excise'."

Cut motion No. 32. Janab Syed Abdur Rahman.

Working of Prohibition Scheme in the State.

*Janab SYED ABDUR RAHMAN (Chikmagalur *cum* Shimoga–Muslim).—Sir, I beg to move :

"That the demand under the head '8. State Excise Duties (b) District Executive Establishment' for Rs. 3,86,300 be reduced by Rs. 100 (to raise a debate on the policy of the working of the Prohibition Scheme in the State."

Sir, while moving this cut motion I wish to state that the Government have undoubtedly for more than two years been very vigorously following the policy of prohibition in the Mysore State. I am glad that the Hon'ble Minister for Excise in his speech yesterday made reference to the policy that he would follow with regard to the extension of prohibition in the State. Two things emerge from his speech clearly : one is that as a consequence of having worked the scheme of prohibition there was considerable difficulty for the Administration to deal with it because there was so much of illicit distillation, that the Government detected several thousands of cases, and fines have been realised to a large extent. That is one aspect. The other aspect is with regard to the loss of revenue to the State consequent on having vigorously followed the policy of prohibition. Ever since the new Ministry came to the office, ever since prohibition was introduced, I have not got the least doubt that they did not show any slackness so far as the working of the scheme is concerned. They did as best as they could. As a result of that Government undoubtedly

suffered financial loss also. Later it was revealed that going further, so far as prohibition was concerned, would entail a lot of administrative difficulties because we have seen from the figures that the Hon'ble Minister gave yesterday that there were any number of cases of illicit distillation detected. Although he agreed with many of the Hon'ble Members of this House that there was no difference of opinion between him and the other members who spoke in favour of the extension of the scheme, he still said that it was better that we should wait and see for some time more as to whether the policy of prohibition if further given effect to would not make the State incur more financial losses. That is a point which we have got to seriously consider. The State has got on hand various capital schemes, which require large sums of money. By having introduced prohibition in the State, it had undoubtedly lost revenue but that did not mean that Government should sacrifice the principle which they love and which was one of the well established essential programmes.

Mr. SPEAKER.—What is the Hon'ble Member speaking about ?

Janab SYED ABDUR RAHMAN.—I am discussing the policy of prohibition with regard to the working of prohibition. How is it working ? It has worked with all the disadvantages and undoubtedly successfully. But whether they should pursue the policy of prohibition or not is also a point which I am considering. The cut motion is a very general one with regard to the working of the scheme. I have pointed out that it has worked with several disadvantages, that there have been a lot of illicit distillation, that that has been a disadvantage so far as the revenue of the State is concerned. It has worked successfully and it is a compliment to the Government, and I am going to say that at the end. Therefore it is better that Government stop at that and do not go further because they are working under handicaps.

Mr. SPEAKER.—Is the Hon'ble Member speaking for or against the Government ?

Janab SYED ABDUR RAHMAN.—That is why I made it clear at the very beginning itself about what the Hon'ble Excise Minister said in his speech yesterday.

Mr. SPEAKER.—If the Hon'ble Member is convinced about the facts and figures, there is no need for this cut motion at all.

Janab SYED ABDUR RAHMAN.—It has got to be discussed. There might be so many members who would oppose it.

Mr. SPEAKER.—What the Hon'ble Member is going to discuss should be made clear. Otherwise, what can other members speak about ?

Janab SYED ABDUR RAHMAN.—I have suggested in the course of my speech on the cut motion that Government have for these two years worked very vigorously the policy of prohibition as a result of which Government have sustained loss in revenue. Government have detected several cases of illicit distillation and it is therefore not in the interest of Government to continue prohibition further.

Mr. SPEAKER.—It is for the Government to speak about that. It is not for the Hon'ble Member to say that on the cut motion.

Janab SYED ABDUR RAHMAN.—I referred to the disadvantages arising out of it. I wanted to refer to the fact that there was a directive to the various State Governments from the Centre to go slow.

Mr. SPEAKER.—It looks as though the Hon'ble Member is speaking on behalf of the Government and defending their policy. That is not the purpose of a cut motion.

Janab SYED ABDUR RAHMAN.—The policy has worked well.

Mr. SPEAKER.—That is all right. There is no use of discussing about it. If the Hon'ble Member says it has worked well, there is nothing more to discuss about it.

Janab SYED ABDUR RAHMAN.—But, it has got some disadvantages also. I want to point out the disadvantages, *i.e.*, about the illicit distillation, how

(JANAB SYED ABDUR RAHMAN.)

much money is spent by the Government to stop this. I want to speak about that.

Rajamantrapravina H.B. GUNDAPPA GOWDA (Hassan District -General).—The object of a cut motion must be to bring to the notice of the House the acts of omission or commission on the part of the Government. I do not know whether this cut motion has any object at all.

Janab SYED ABDUR RAHMAN.—What I wanted to say is that the Government have to face several difficulties in removing these defects. Let us think of those difficulties.

Sri M. GOVINDA REDDY (Chitaldrug District–General).—The Hon'ble Member must point out the defects in the working.

Mr. SPEAKER.— The Hon'ble Member may finish his speech. I have not been able to understand his point. He says that the policy is working all right. If so, there is no point in his moving or speaking on this cut motion at all.

Janab SYED ABDUR RAHMAN.—I want to know how many cases of illicit distillation were detected, how much money is spent, whether this policy will be pursued, whether they require police force. All these I want to discuss.

Sri H. M. CHANNABASAPPA (Mysore District—General).—These details can be ascertained during question hour. They cannot form the subject matter for a cut motion.

Mr. SPEAKER.—Will the Hon'ble Member Janab Abdur Rahman kindly finish his speech ?

Janab MAHMOOD SHARIFF (Mysore *cum* Mandya *cum* Hassan—Muslim).—With your permission, Sir, what he wants to say is, most probably . . .

Mr. SPEAKER.—I think he can explain himself. (Laughter)

The Hon'ble Sri H. SIDDAIYA.—I must thank the Mover of the cut motion because he is of the opinion having so many facts before him and having heard me last night . . .

Janab MAHMOOD SHARIFF.—On a point of order, Sir. The cut motion is before the House and it must be allowed to be discussed threadbare. There are persons who may talk for and against it. Before giving a chance to discuss it the Government should not reply There are several members who wish to speak on the cut motion.

Mr. SPEAKER.—But the difficulty is, others cannot raise any other issue except the points raised by the Mover. So, really there is no point to discuss.

Janab MAHMOOD SHARIFF.—On the fact of it, the proposer wants to see . . .

Mr. SPEAKER.—The Hon'ble Member cannot read his mind. Only those points he has referred to should be discussed.

Janab MAHMOOD SHARIFF.—Anyway, there are several Members who want to speak on this. What he has been saying is, in some respects they are working satisfactorily and in many other respects it is not working satisfactorily.

Sri H. B. GUNDAPPA GOWDA.--It must be held out of order, Sir. There is no necessity for the Minister even to reply.

ಶ್ರೀ ಎ. ಸುಬ್ಬರಾಯ ಶೆಟ್ಟರು (ಕೋಲಾರ ಜಿಲ್ಲೆ). — ಈಗ ಸಭೆಯ ಮುಂದಿರುವ ನಿರ್ಣಯದ ವಿಷಯದ ಮೇಲೆ ಇನ್ನು ಯಾರಾದರೂ ಅವರು ನಿರ್ಣಯದಲ್ಲಿ ಏನು ಹೇಳಿದ್ದಾರೋ ಅದರ ವಿಷಯದಲ್ಲೇ ಮಾತನಾಡುವುದಕ್ಕೆ ಅವಕಾಶವಿದೆಯೇ ?

ಅಧ್ಯಕ್ಷರು.—ಅವರು ಹೇಳಿದ ವಿಷಯದಮೇಲೆ ಮಾತ್ರ ಮಾತನಾಡುವುದಕ್ಕೆ ಅವಕಾಶವಿದೆ.

ಶ್ರೀ ಎ. ಸುಬ್ಬರಾಯಶೆಟ್ಟರು.—ಅವರು ತಮ್ಮ ಭಾಷಣದಲ್ಲಿ ಯಾವ ಅಂಶಗಳನ್ನು ಪ್ರತಿಪಾದಿಸಿದ್ದಾರೋ ಅದರ ಮೇಲೆ ಮಾತನಾಡಬಹುದಲ್ಲವೇ ?

ಅಧ್ಯಕ್ಷರು.—ಹೌದು.

Sri H. C. LINGA REDDY.—Now that the cut motion has been allowed and the Hon'ble Member has made certain observations—what he says may not be very material—the different aspects of the cut motion should be allowed for discussion.

Mr. SPEAKER.—I think it would not be of any use to discuss this point any further.

The Hon'ble Sri H. SIDDAIYA.—Sir, the Mover has admitted that the working of the prohibition scheme is very

satisfactory in spite of certain defects and handicaps. I thank him.

Mr. SPEAKER.—What does the Hon'ble Member propose to do with the cut motion?

Janab SYED ABDUR RAHMAN.—I seek the leave of the House to withdraw it, Sir.

The cut motion was, by leave of the House, withdrawn.

Policy of Government re: Sale of Toddy and Arrack Shops.

Sri M. N. JOIS.—(Mysore District—General) —Sir, I beg to move:

"The demand under the head "8. State Excise" for Rs. 16,90,000 be reduced by Rs. 100 (with a view to discuss the policy of the Government regarding the system of sale of Toddy and Arrack Shops).

ಸ್ವಾಮಿ, ಈಗ ಹೆಂಡ, ಸಾರಾಯಿ– ಇವುಗಳನ್ನು ಮಾರಾಟ ಮಾಡುವುದಕ್ಕೆ, ಕಂಟ್ರಾಕ್ಟ್ ಕೊಡುವುದಕ್ಕೆ ಹಾಲಿ ಸಂಸ್ಥಾನದಲ್ಲಿ ಒಂದು ವಿಧಾನ ಜಾರಿಯಲ್ಲಿದೆ. ಏನೆಂದರೆ ಸಾಧಾರಣವಾಗಿ ತಾಲ್ಲೂಕುಗಳಲ್ಲಿರುವ ಎಲ್ಲಾ ಅಂಗಡಿಗಳನ್ನೂ ಒಟ್ಟುಗೂಡಿಸಿ ಒಟ್ಟೊಟ್ಟಿಗೆ ತಾಲ್ಲೂಕು ತಾಲ್ಲೂಕುಗಳಾಗಿ ಹರಾಜು ಹಾಕುವುದು ಈಗ ವಾಡಿಕೆಯಲ್ಲಿದೆ. ಈ ಪದ್ಧತಿಯಿಂದ ನಮ್ಮ ಸಂಸ್ಥಾನಕ್ಕೆ ಬರಬಹುದಾದ ಹಣ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆಯೆಂದು ನಮ್ಮ ಭಾವನೆ. ಏಕೆಂದರೆ ಈ ಪ್ರಕಾರ ಒಟ್ಟೊಟ್ಟಿಗೆ ಹರಾಜು ಹಾಕುವ ರೀತಿಯಿಂದ ನೂರಾರು, ಸಾವಿರಾರು ಜನ ಚಿಲ್ಲರೆ ಅಂಗಡಿಯವರು ಒಂದು ಹರಾಜಿನಲ್ಲಿ ಕೂಗುವುದಕ್ಕೆ ಅವಕಾಶವಿರುವುದಿಲ್ಲ. ಕೇವಲ ದೊಡ್ಡದೊಡ್ಡ ಮನುಷ್ಯರು, ಒಂದುಲಕ್ಷ ಎರಡುಲಕ್ಷ ರೂಪಾಯಿಗಳಷ್ಟು ಒಟ್ಟು ಕಿಸ್ತನ್ನು ಕಟ್ಟುವುದಕ್ಕೆ ಶಕ್ತಿಯಿರತಕ್ಕ ಜನ ಮಾತ್ರ ಹರಾಜಿನಲ್ಲಿ ಭಾಗವಹಿಸುತ್ತಾರೆ ಅಷ್ಟೆ. ಉಳಿದ ಸಣ್ಣ ಸಣ್ಣ ಅಂಗಡಿಯವರೆಲ್ಲಾ ಆ ದೊಡ್ಡ ಮನುಷ್ಯನು ಕೂಗಿ ಹರಾಜಿನಲ್ಲಿ ಕಂಟ್ರಾಕ್ಟ್ ಮಾಡಿಕೊಂಡಮೇಲೆ ಅವನ ಹತ್ತಿರ ಹೋಗಿ ಅಂಗಡಿಗಳನ್ನು ವ್ಯಾಪಾರಕ್ಕೆ ತೆಗೆದುಕೊಂಡು 2-3 ತಿಂಗಳುಗಳಿಗೂ ಕಿಸ್ತನ್ನು ಆ ದೊಡ್ಡ ಮನುಷ್ಯನಿಗೆ ಕಟ್ಟುತ್ತಿರುತ್ತಾರೆ. ಈ ಕಿಸ್ತುಗಳನ್ನೆಲ್ಲಾ ಸೇರಿಸಿ ಆ ದೊಡ್ಡ ಕಂಟ್ರಾಕ್ಟುದಾರನು ಸರ್ಕಾರಕ್ಕೆ ಕೊಡುತ್ತಾನೆ. ಹೀಗೆ ಚಿಲ್ಲರೆ ಅಂಗಡಿಯವರಿಗೆ ಮಾರುವ ವಿಚಾರದಲ್ಲಿ ದೊಡ್ಡ ವ್ಯಾಪಾರವೇ ನಡೆಯುತ್ತಿರುತ್ತದೆ. ಆದ್ದರಿಂದ ಸರ್ಕಾರಕ್ಕೂ ಮತ್ತು ವಾಸ್ತವವಾಗಿ ಯಾರು ಹೆಂಡ ಸಾರಾಯಿಗಳನ್ನು ಅಂಗಡಿಗಳಲ್ಲಿಟ್ಟು ಮಾರುತ್ತಿದ್ದಾರೋ ಅವರಿಗೂ ಮಧ್ಯೆ ಒಂದು ದಳ್ಳಾಳಿ ವ್ಯವಹಾರ, commission agency ಇಂದಿನ ಮಾರಾಟದ ಪದ್ಧತಿಯಲ್ಲಿದೆ. ಆದುದರಿಂದ ಮಧ್ಯದಲ್ಲಿ ಹೋಗುವ ಕಮೀಷನ್ ಹಣ ಸರ್ಕಾರಕ್ಕೆ ಬರುವುದಿಲ್ಲ ಅಥವ ಯಾರು ಕಷ್ಟಪಟ್ಟು ಕೆಲಸ ಮಾಡುತ್ತಾರೋ ಅವರಿಗೂ ಬರುವುದಿಲ್ಲ, ಮಧ್ಯೆ ಇರುವ ಬೇರೆಯವರಿಗೆ ಹೋಗುತ್ತದೆ. ಆದಕಾರಣ ಈ ಅಂಗಡಿಗಳನ್ನು ಚಿಲ್ಲರೆಯಾಗಿ ಹರಾಜು ಹಾಕಬೇಕು. ಹೀಗೆ ಮಾಡಿದರೆ ಈಗ ಇರುವ ಲಕ್ಷಾಧೀಶ್ವರರಾದ ಎಕ್ಸೈಜು ಕಂಟ್ರಾಕ್ಟರುಗಳಿಗೆ ಕಮೀಷನ್ ಹಣ ಹೋಗುವುದು ತಪ್ಪುತ್ತದೆ. ಅಲ್ಲದೆ ಇದರಿಂದ ಸರ್ಕಾರಕ್ಕೂ ಹೆಚ್ಚು ವರಮಾನ ಬರುತ್ತದೆ. ಖರ್ಚು ಹೆಚ್ಚಿ ಆಯವ್ಯಯವನ್ನು ಸರಿತೂಗಿಸಲು ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಯೋಚನೆ ಮಾಡುತ್ತಿರುವಾಗ ಈರೀತಿ ಏರ್ಪಾಡು ಮಾಡಿದರೆ ಹೆಚ್ಚು ಹಣ ಬಂದು ಸರಿತೂಗಿಸಬಹುದು. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಈಗಿರತಕ್ಕ ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಚಿಲ್ಲರೆ ಚಿಲ್ಲರೆಯಾಗಿ ಹರಾಜು ಮಾಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿ ಒತ್ತಾಯ ಮಾಡುತ್ತೇನೆ.

Mr. SPEAKER.—Cut motion moved:

"That the demand be reduced by Rs. 100.'

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—ಶ್ರೀಮಾನ್ ಜೋಯಿಸರು ತಂದಿರತಕ್ಕ ಈ ಖೋತಾ ಸೂಚನೆಯನ್ನು ನಾನು ಸಮರ್ಥಿಸುತ್ತೇನೆ. ಈಗಿನ ಪದ್ಧತಿಯಲ್ಲಿ ತಾಲ್ಲೂಕನ್ನೇ ಒಟ್ಟಿಗೆ ಹರಾಜು ಹಾಕುತ್ತಾರೆ. ಹೀಗೆ ಮಾಡುವುದರಿಂದ ಒಂದು ವಿಧವಾದ monopoly ಆಗಲವಕಾಶವಾಗುತ್ತದೆ. ಈಗ ಯಾರು ಶ್ರೀಮಂತರೋ ಯಾರು ಬಹಳಕಾಲದಿಂದ ಈ ಕಂಟ್ರಾಕ್ಟು ಕೆಲಸ ಮಾಡಿಕೊಂಡು ಬರುತ್ತಿದ್ದಾರೋ ಅವರೇ ಹರಾಜಿನಲ್ಲಿ ಭಾಗವಹಿಸಿ ಇದನ್ನು ಪಡೆಯಲು ಅವಕಾಶವಾಗಿದೆಯೇ ವಿನಾ ಸಣ್ಣ ವರ್ತಕರು ಪಡೆಯಲು ಅವಕಾಶವೇ ಇಲ್ಲ. ತಾಲ್ಲೂಕನ್ನೇ ಹರಾಜು ಮಾಡಿದರೆ ಹೆಚ್ಚು ಹಣ ಕಟ್ಟಬೇಕಾಗುತ್ತದೆ, ಇದು ಶ್ರೀಮಂತರಿಗೆ ಮಾತ್ರ ಸಾಧ್ಯ. ಆದುದರಿಂದ ಅವರು ಸೂಚಿಸಿರುವಂತೆ ಹೋಬಳಿ ಅಥವ ಒಂದೊಂದು ಅಂಗಡಿಯನ್ನೇ ಬೇರೆ ಬೇರೆಯಾಗಿ ಹರಾಜು ಹಾಕುವುದರಿಂದ ಸಣ್ಣಸಣ್ಣ ವರ್ತಕರೂ ತೆಗೆದುಕೊಳ್ಳಲು ಅನುಕೂಲವಾಗುತ್ತದೆಯಲ್ಲದೆ ಸರ್ಕಾರಕ್ಕೂ ಹೆಚ್ಚು ಹಣ ಬರುತ್ತದೆ. ಆದಕಾರಣ ಈಗಿನ ಪದ್ಧತಿಯನ್ನು ತಪ್ಪಿಸಿ ಸಣ್ಣ ಸಣ್ಣ ಭಾಗಗಳನ್ನು ಮಾಡಿ ಹರಾಜು ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ಸಿವಿಲ್ ಪ್ರದೇಶ).—ಸ್ವಾಮಿ, ನಾನೂ ಕೂಡ ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗಿರುವ ಪದ್ಧತಿಯಲ್ಲಿ ಒಂದು ಕಷ್ಟವಿದೆ. ಏನೆಂದರೆ, ಒಂದೊಂದು ಜಿಲ್ಲೆಗೇ ಟೆಂಡರುಗಳನ್ನು ಕಾಲ್‌ಫಾರ್ ಮಾಡಿ ಸಾರಾಯಿ ಮತ್ತು ಹೆಂಡದ ಅಂಗಡಿ ಕೊಡುವುದರಿಂದ ಶ್ರೀಮಂತರಿಗೇ ಅವು ಸಿಕ್ಕುತ್ತಿವೆ. ಇದಕ್ಕೆ ಟೆಂಡರು ಕೊಡಲು ಶ್ರೀಮಂತರಿಗೆ ಸಾಧ್ಯವೇ ಹೊರತು ಬಡವರಿಗೆ ಸಾಧ್ಯವೇ ಇಲ್ಲ. ಈಗ ಸರ್ಕಾರದವರು ನಾಲ್ಕು ಜಿಲ್ಲೆಗಳಲ್ಲಿ ಪಾನನಿರೋಧವಿಲ್ಲದೆ ಅಬ್ಕಾರಿ ಹರಾಜು ಪದ್ಧತಿಯನ್ನಿಟ್ಟುಕೊಂಡಿರುವುದರಿಂದಲೂ, ವರಮಾನ ಹೆಚ್ಚು ಬರಬೇಕಾಗಿರುವುದರಿಂದಲೂ ಚಿಲ್ಲರೆಯಾಗಿ ಒಂದೊಂದು ಅಂಗಡಿಯನ್ನು ಒಬ್ಬೊಬ್ಬರಿಗೆ ಹರಾಜು ಮಾಡಿಕೊಟ್ಟರೆ ಅನುಕೂಲ. ಇದರಲ್ಲಿ ಹೆಂಡದ ಅಂಗಡಿ, ಸಾರಾಯಿ ಅಂಗಡಿ, ಸೇಂದಿ ಅಂಗಡಿ, ಅಫೀಮು ಅಂಗಡಿ ಹೀಗೆ ಬೇರೆ ಬೇರೆಯಾಗಿ ಅಂಗಡಿಸಿಕೊಡುವುದರಿಂದ ಹೆಚ್ಚು ಆದಾಯ ಬಂದು ಆಯವ್ಯಯ ಪಟ್ಟಿಯಲ್ಲಿ ಖೋತಾ ಆಗಿರುವುದು ಹೋಗಿ ದೇಶಕ್ಕೆ ಉಪಕಾರವಾಗುತ್ತದೆಂದು ಹೇಳಿ ಈ ಕತ್ತರಿ ನಿರ್ಣಯವನ್ನು ಸಮರ್ಥಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಾಮಿ, ಈ ಖೋತಾ ಸೂಚನೆಯ ಬಗ್ಗೆ ನಾನು ಎರಡು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ. ಸರ್ಕಾರದಿಂದ ಸರಬರಾಜುಮಾಡುವ ಸಾರಾಯಿ, ಅಫೀಮು, ಗಾಂಜಾ ಇಂತಹ ಬಾಬುಗಳನ್ನು ಅಂಗಡಿವಾರು ಅಥವ ಹೋಬಳಿವಾರು ಹರಾಜುಮಾಡಿದರೆ ಪ್ರಾಯಶಃ ಹೆಚ್ಚು ಹಣ ಬರಬಹುದು. ಆದರೆ ಹೆಂಡದ ವಿಚಾರದಲ್ಲಿ ಹೀಗೆ ಮಾಡಿದರೆ ತೊಂದರೆಯಾಗಬಹುದೆಂದು ನನಗನ್ನಿಸುತ್ತದೆ. ಏಕೆಂದರೆ, ಹೆಂಡವನ್ನು ಒಬ್ಬೊಬ್ಬರೇ ಗುತ್ತಿಗೆಗೆ ತೆಗೆದುಕೊಳ್ಳುವವರು ಹೆಂಡವನ್ನಿಳಿಸಲು ಏರ್ಪಾಡು ಮಾಡಬೇಕಾಗುತ್ತದೆ. ಆದಕಾರಣ ಇದಕ್ಕೆ ಬೇಕಾಗುವ ಸಿಬ್ಬಂದಿಯನ್ನಿಟ್ಟುಕೊಳ್ಳಬೇಕಾಗುತ್ತದೆ. ಒಂದೊಂದು ಅಂಗಡಿಯನ್ನೋ ಅಥವ ಹೋಬಳಿಯನ್ನೋ ಹರಾಜುಮಾಡಿದರೆ ಸ್ವಲ್ಪ ಹಣವಿರುವವರು ಪಡೆಯಬಹುದಾದರೂ ಇದಕ್ಕೆ ತಕ್ಕ ಸಿಬ್ಬಂದಿಯನ್ನಿಟ್ಟು ಹೋಬಳಿಯಲ್ಲೆಲ್ಲಾ ಬೇಕಾಗುವಷ್ಟು ಹೆಂಡವನ್ನಿಳಿಸಲು ಅವಶ್ಯಕವಾದಷ್ಟು ಹಣವಿಲ್ಲದೆ ಕಷ್ಟವಾಗಿ ಸಾಧ್ಯವಾಗದೇಯಿರಬಹುದು. ತಾಲ್ಲೂಕುವಾರು ಹರಾಜುಮಾಡುವುದರಿಂದ ಇಷ್ಟು ಮರಗಳಿರುತ್ತವೆಂದು ನಿಗದಿಮಾಡಿರುತ್ತಾರೆ. ಅದಕ್ಕೆ ತಕ್ಕ ಸಿಬ್ಬಂದಿಯನ್ನಿಟ್ಟುಕೊಂಡು ಇಳಿಸಿ ಮಾರಲು ಹಣವಿರುವವರು ಶಕ್ತರಾಗಿರುತ್ತಾರೆ. ಹೀಗೆ ಹರಾಜಿನಲ್ಲಿ ತಾಲ್ಲೂಕನ್ನೇ ತೆಗೆದುಕೊಂಡು ಒಬ್ಬೊಬ್ಬರೂ ಕೂಡ ಷಿಕ್ಮಿಯಾಗಿ ಬೇರೆಬೇರೆಯವರಿಗೆ ಕೊಡುತ್ತಾರೆ. ಆ ಷಿಕ್ಮಿದಾರರು ವ್ಯಾಪಾರಮಾಡಿ ಬರುವ ಲಾಭದಿಂದ ತೃಪ್ತಿಯಾಗುತ್ತಾರೆ. ಅಂತೂ ಹೆಂಡವನ್ನಿಳಿಸಬೇಕಾದ ಕೆಲಸವಿರುವುದರಿಂದ ಬೇರೆಬೇರೆಯಾಗಿ ಸಣ್ಣಸಣ್ಣ ವ್ಯಾಪಾರಿಗಳಿಗೆ ಕೊಡುವುದರಿಂದ ಕಷ್ಟವಾಗಬಹುದೆಂದು ಸೂಚಿಸಲಪೇಕ್ಷಿಸುತ್ತೇನೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಎರಡು ದೃಷ್ಟಿಗಳಿಂದ ಈಗ ಸಭೆಯಮುಂದಿರತಕ್ಕ ಖೋತಾ ನಿರ್ಣಯವನ್ನು ಸಮರ್ಥನೆಮಾಡಬೇಕಾಗಿದೆ. ಒಂದು ಇದುವರೆಗೆ ಅನೇಕರು ಈ ಅಮಲು ಬಾಬುಗಳಲ್ಲಿ ವ್ಯಾಪಾರ ಮಾಡುತ್ತಾ ಇದ್ದವರಿಗೇ ಅನುಕೂಲವಾಗುತ್ತಿದೆ. ಈ ಖೋತಾ ನಿರ್ಣಯದಲ್ಲಿ ಸೂಚಿಸಿರುವಂತೆ ಮಾಡಿದರೆ ಸರ್ಕಾರಕ್ಕೆ ಹೆಚ್ಚು ಹಣ ಬರಲನುಕೂಲವಾಗುತ್ತದೆ. ಈಗ ಚಕ್ಕೆ ಹರಾಜುಮಾಡುತ್ತಿದಾರೆ. ಒಟ್ಟು ಸಂಸ್ಥಾನವನ್ನೇ ತೆಗೆದುಕೊಂಡು ಹರಾಜುಮಾಡುತ್ತಿದ್ದರು. ಆಮೇಲೆ ಒಂದೊಂದು ಜಿಲ್ಲೆಯಾಗಿ ಹರಾಜಾಗುತ್ತಿತ್ತು. ಯಾರು ಇದನ್ನು ತೆಗೆದುಕೊಳ್ಳುತ್ತಾರೋ ಅವರು ಹೋಬಳಿವಾರು ಹರಾಜುಮಾಡಿ ಅದರಿಂದ ಬರುವ ಲಾಭವನ್ನು ಅವರೇ ತೆಗೆದುಕೊಳ್ಳುತ್ತಿದ್ದರು. ಹೀಗೆ monopoly ವ್ಯವಸ್ಥೆಮಾಡುವುದರಿಂದ ಒಬ್ಬಬ್ಬರಿಗೆ ಅನುಕೂಲವಾಗುತ್ತದೆಯೇ ಹೊರತು ಬಾಕಿಯವರಿಗೆ ಆಗುವುದಿಲ್ಲ. ಆದುದರಿಂದ ಎಲ್ಲಿಯವರೆಗೆ ಈ ಅಮಲು ಬಾಬುಗಳನ್ನು ಹರಾಜುಮಾಡುವ ಪದ್ಧತಿಯನ್ನಿಟ್ಟುಕೊಂಡಿರುತ್ತೇವೆಯೋ ಅಲ್ಲಿಯವರೆಗೂ ಒಬ್ಬಬ್ಬರಿಗೆ ಮಾತ್ರ ಅನುಕೂಲವಾಗುವಂತೆ ಮಾಡುವುದಕ್ಕೆ ಬದಲು ಅನೇಕರಿಗೆ ಅನುಕೂಲವಾಗುವಂತೆ ಮಾಡಬೇಕು, ಮತ್ತು ಸರ್ಕಾರಕ್ಕೆ ಹೆಚ್ಚು ಹಣ ಬರುವಂತೆ ಆಗಬೇಕು ಎಂಬ ಉದ್ದೇಶದಿಂದ ಈ ಖೋತಾ ಸೂಚನೆಯನ್ನು ತಂದಿದ್ದಾರೆ. ಈ ಸೂಚನೆಯಂತೆ ಮಾಡುವುದರಿಂದ ಸರ್ಕಾರಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಒಂದೊಂದು ತಾಲ್ಲೂಕನ್ನೂ ಒಟ್ಟಿಗೆ ಹರಾಜುಮಾಡಿದರೆ ಲಕ್ಷಾಂತರ ರೂಪಾಯಿ ಬೇಕಾಗುತ್ತದೆ. ಇದು ದೊಡ್ಡವರಿಗೆ ಸಾಧ್ಯವೇ ಹೊರತು ಸಣ್ಣಸಣ್ಣವರಿಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಸೂಚನೆಯಲ್ಲಿರುವಂತೆ ಹೋಬಳಿವಾರು ಅಥವ ಅಂಗಡಿವಾರು ಹರಾಜುಮಾಡಬೇಕೆಂದು ಹೇಳಿ ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

Janab MAHMOOD SHARIFF (Mysore *cum* Mandya *cum* Hassan-Muslim).—I am afraid, Sir, that my friend Sri M. N. Jois has not considered the practical difficulties arising out of the system which he wants to sponsor. The Government did try this 'shimi' system and unfortunately on account of the many practical difficulties it had to be given up. If the shops are to be sold hobliwar many people will not be forthcoming to purchase them. A large capital is needed to run the shops and also for equipment and many other things which a hobliman cannot manage.

Sri B. M. SHAMANNA GOWDA—It is only for toddy but not for arrack.

Janab MAHMOOD SHARIFF.—Therefore with due deference to the Hon'ble mover the proposal is not practicable in its application. The present system of having talukwar sales will be not only profitable to Government but also convenient to contractors.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲಸ ಸರಿಯಾಗಿ ನಡೆಯಲು ಅನುಕೂಲವಾಗಲೆಂಬ ಉದ್ದೇಶದಿಂದ ತಾಲ್ಲೂಕುವಾರು ಹರಾಜು ಮಾಡಿಸುತ್ತೇವೆಯೇ ವಿನಾ ಶ್ರೀಮಾನ್ ಶಾಮಣ್ಣಗೌಡರು ಹೇಳಿದಂತೆ ಡಿಸ್ಟ್ರಿಕ್ಟುವಾರು ಹರಾಜುಮಾಡಿಸುತ್ತಿಲ್ಲ. ಜನಾಬ್ ಮಹಮೂದ್ ಷರೀಫ್‌ರವರೂ ಶ್ರೀಮಾನ್ ವೀರಣ್ಣಗೌಡರೂ ಅಪ್ಪಣೆ ಕೊಡಿಸಿದಹಾಗೆ ಇದರ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ಯೋಚನೆ ಮಾಡಬೇಕಾಗಿದೆ. ಫಿರ್ಕಾ ಅಥವ ಹೋಬಳಿವಾರು ಹರಾಜುಮಾಡಿದರೆ ಅವರು ಹೇಳಿರತಕ್ಕ ಕೆಲವು ತೊಂದರೆಗಳಿವೆಯೆಂಬುದು ನಿಧಾನವಾಗಿ ಯೋಚನೆಮಾಡಿದರೆ ಗೊತ್ತಾಗುತ್ತದೆ. ಏನೇ ಆಗಲಿ ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನೂ ಇಟ್ಟುಕೊಂಡು ಆಲೋಚನೆಮಾಡಿ, ಇದು ಹೆಚ್ಚು ಲಾಭದಾಯಕವಾದ ಪಕ್ಷದಲ್ಲಿ ಜಾರಿಗೆ ಕೊಡುವುದನ್ನು ಸರ್ಕಾರದವರು ಯೋಚನೆಮಾಡುತ್ತಾರೆ. ಇದು ಸಕಾಲವಾಗಿದೆ. ಇಷ್ಟು ಭರವಸೆ ಕೊಡುತ್ತೇನೆ.

ಶ್ರೀ ಎಂ. ಎನ್. ಜೋಯಿಸರು.—ಸರ್ಕಾರಕ್ಕೆ ಹೆಚ್ಚು ಲಾಭ ಬರುವುದರಿಂದಲೇ ಇದನ್ನು ತಂದಿರುವುದು. I seek the permission of the House to withdraw the cut motion.

The cut motion was, by leave of the Assembly, withdrawn.

Mr. SPEAKER.—The question is :

"That a sum not exceeding Rs. 16,90,000 be granted to the Government to defray the charges which will come in course of payment during the year ending 31st day of March 1952, in respect of 'State Excise'."

The motion was adopted.

DEMAND No. 3—STAMPS

9. Stamps.

The Hon'ble Sri H. SIDDAIYA (Minister for Revenue and Excise).—Sir, on the recommendation of His Highness the Maharaja, I beg to move :

"That a sum not exceeding Rs. 1,89,000 be granted to the Government to defray the charges which will come in course of payment during the year ending 31st day of March 1952 in respect of 'Stamps'."

Mr. SPEAKER.—The question is :

"That a sum not exceeding Rs. 1,89,000 be granted to the Government to defray the charges which will come in course of payment during the year ending 31st day of March 1952 in respect of 'Stamps'."

The motion was adopted.

DEMAND No. 4—FOREST

10. Forest.

The Hon'ble Sri R. CHENNIGARAMIAH (Minister for Local Self-Government).—Sir, on the recommendation of His Highness the Maharaja, I beg to move:

"That a sum not exceeding Rs. 37,66,000 be granted to the Government to defray the charges which will come in course of payment during the year ending 31st day of March 1952, in respect of 'Forest'."

Mr. SPEAKER.—Motion moved:

"That a sum not exceeding Rs. 37,66,000 be granted to the Government to defray the charges which will come in course of payment during the year ending 31st day of March 1952, in respect of 'Forest'."

Improvement of forests in the State.

*Janab SYED ABDUR RAHMAN (Chikmagalur *cum* Shimoga—Muslim).—Sir, I beg to move :

"That the demand under the head "10. Forests (b) Conservancy and Works" for Rs. 22,15,700 be reduced by Rs. 100 (to raise a discussion regarding the improvement of forests in the State)."

Sir, this cut motion aims at the improvement of the forest wealth in the State of Mysore. The Government have taken several steps in this direction but the yield under Forest, except under Sandal-oil—very recently it has shown some increase in the Forest Revenue—does not show any considerable increase. Therefore, it would be in the fitness of things that the Government of Mysore adopt such measures as would improve the condition of the forests to the extent possible under the existing circumstances. I do not know what action the Government have been taking in the direction of improvement of forest ever since the Hon'ble Minister came into office. We shall indeed be very much enlightened if the Hon'ble Minister who has moved this grant shows us in what directions the Government have adopted measures to improve the revenues from the forest.

The Hon'ble Sri H. C. DASAPPA (Minister for Finance and Industries).—The Budget figures are evidence.

Janab SYED ABDUR RAHMAN.—Not much progress has been made in this direction. Income from Forest is very steady. So it is better that we draw the attention of the Government to improve the forest revenue and show a greater revenue under 'Forest'. That is all the object with which I am moving the cut motion.

Mr. SPEAKER.—Cut motion moved :

"That the demand be reduced by Rs. 100."

Sri V. M. MASCARENHAS (Bangalore Retroceded Area—General).—I oppose the cut motion and in doing so, I wish to point out to my friend, Janab Abdur Rahman that his desire to show more and more forest revenue in the budget is not in the best interests of the country. In fact, I wanted to refer to the forest figures of Rs. 22 lakhs. I would have been very happy if there was no income at all from the Forest Department so far as timber was concerned. Our forests are being depleted. The Conservator of Forests and perhaps

(SRI V. M. MASCARENHAS.)

also the Hon'ble Minister are doing their utmost to cut more and more trees every year to keep up this high revenue. It is a very very sad state of affairs and unless and until for every tree that we cut we plant another it is not in the best interests of the country to see in the forest budget more and more revenue every year.

Mr. SPEAKER.—The Hon'ble Member wants it to be improved?

Sri V. M. MASCARENHAS.—Have more nurseries and less cutting. Instead, the trees are being cut simply. The Hon'ble mover of the cut motion is criticising the Government for not showing greater revenue under Forest. The revenue under Forest can be increased if more trees are grown and when more trees are cut. So I oppose the cut motion if that is the intention of the mover.

ಶ್ರೀ ಎನ್. ಹುಚ್ಚೆಮಾಸ್ತಿಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ಖೋತಾ ಸೂಚನೆಯನ್ನು ಸಮರ್ಥನೆ ಮಾಡುತ್ತಾ ಒಂದೆರಡು ವಿಷಯಗಳನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸರ್ಕಾರದವರು ಈಗ ಈ ಕಾಡುಗಳಿಂದ ಬರತಕ್ಕ ಉತ್ಪತ್ತಿ ಬಹಳ ಚೆನ್ನಾಗಿದೆಯೆಂದು ತಿಳಿಸಿದ್ದಾರೆ. ಆದರೆ ಇಂದು ಸಭೆಯಮುಂದೆ ಬಂದಿರತಕ್ಕ ನಿರ್ಣಯದಲ್ಲಿ 'to raise a discussion regarding the improvement of forests in the State' ಎಂದು ತಿಳಿಸಲಾಗಿದೆ. ಈ ಪೈಕಿ ದೊಡ್ಡ ದೊಡ್ಡ ಕಾಡುಗಳು ಅಂದರೆ, ಕಾಕನಕೋಟೆ, ಹೆಗ್ಗಡದೇವನ ಕೋಟೆ ಇಂಥಾ ಕಾಡುಗಳ ವಿಚಾರವಾಗಿ ನಾನೀಗ ವಿಮರ್ಶೆಮಾಡಲು ಹೋಗುವುದಿಲ್ಲ. ಅವುಗಳನ್ನೆಲ್ಲಾ ಕೈ ಬಿಟ್ಟು ಕೇವಲ ಸಣ್ಣಸಣ್ಣ ಕಾಡುಗಳ ಬಗ್ಗೆ ಕೆಲವು ನನಗೆ ಗೊತ್ತಿರತಕ್ಕ ಅಂಶಗಳನ್ನು ಪ್ರಸ್ತಾಪಮಾಡಲಿಚ್ಛಿಸುತ್ತೇನೆ.

ಸೌದೆಗಾಗಿ ಲೈಸೆನ್ಸು ಕೊಡತಕ್ಕ ಒಂದು ಪದ್ಧತಿ ಜಾರಿಯಲ್ಲಿರುವುದರಿಂದ ಇಂದು ಈ ಕಾಡುಗಳೆಲ್ಲಾ ನಾಶವಾಗಲು ಕಾರಣವಾಗಿರುತ್ತೆ. ಈಗ ಕಟ್ಟಿಗೆಗಾಗಿ ಲೈಸೆನ್ಸು ಪಡೆಯತಕ್ಕವರು ಎಂಟಾಣೆ, 12 ಆಣೆಗಳನ್ನು ಕೊಟ್ಟು, ಲೈಸೆನ್ಸು ಪಡೆದುಕೊಂಡನಂತರ ಕಾಡಿಗೆ ಹೋಗಿ ಯಾವ ಮರಗಳನ್ನು ಕಡಿಯಬೇಕು, ಎಷ್ಟು ಬಿಟ್ಟು ಯಾವ ಮಟ್ಟಕ್ಕೆ ಅವುಗಳನ್ನು ಕತ್ತರಿಸಬೇಕು, ಭೂಮಿಗೆ ಎಷ್ಟು ಎತ್ತರದಲ್ಲಿಟ್ಟು ಅವುಗಳನ್ನು ಕಡಿಯಬೇಕು ಎಂಬ ತಿಳುವಳಿಕೆಯಿಲ್ಲದೆ ಕತ್ತರಿಸುತ್ತಿರುವುದರಿಂದ ಈ ದಿವಸ ಕಾಡು ಹಾಳಾಗುತ್ತಿದೆ. ಈ ಪದ್ಧತಿಯನ್ನು ತಪ್ಪಿಸಿ ಸರ್ಕಾರದವರೇ ಕೆಲವುಕಡೆ ಮರಗಳನ್ನು ಕಡಿದು ಲಾಟ್ ಹಾಕಿಸಿ ಸೌದೆಯನ್ನು ಹರಾಜು ಹಾಕುವುದನ್ನು ಜಾರಿಗೆ ತರಬೇಕು. ಇದ್ದಿಲನ್ನು ಸುಡತಕ್ಕ ಕೆಲಸ ಪ್ರಾರಂಭವಾದಮೇಲಂತೂ ಕಾಡುಗಳು ದಿನದಿನಕ್ಕೂ ಬೇಗ ಬೇಗ ನಶಿಸಿಹೋಗುತ್ತಿವೆ. ಹೀಗೆ ಕಾಡುಗಳು ಹೀನಸ್ಥಿತಿಗೆ ಬಂದುದರಿಂದಲೇ ನಮ್ಮ ದೇಶದಲ್ಲಿ ಮಳೆ ಬೆ[illegible]ಸು ಹೋಗಲು ಕಾರಣವಾಯಿತು. ಕಾಡುಗಳ ಹೀನಸ್ಥಿತಿಗೆ ಮುಖ್ಯ ಕಾರಣ ಹೀಗೆ ಇದ್ದಲು ಸುಡತಕ್ಕದ್ದೇ ಆಗಿದೆ. ಈ ಇದ್ದಲು ಸುಡುವುದರಲ್ಲಿ ಮತ್ತೊಂದು ವಿಚಾರವಿದೆ. ಕಾಡುಗಳಿರತಕ್ಕ ಸ್ಥಳದ ಸುತ್ತ ಮುತ್ತಲೂ 5 ಮೈಲಿಗಳ ಫಾಸಲೆಯಲ್ಲಿರತಕ್ಕವರಿಗೆ ಯಾರಿಗೂ ಸೌದೆ ಕಡಿದು ಇದ್ದಿಲನ್ನು ಸುಡುವ ಅವಕಾಶ ಕೊಡಬಾರದು. ಈಗ ಕೆಲವರು ಅಲ್ಲಲ್ಲೇ ತಮ್ಮ ಜಮೀನುಗಳಲ್ಲಿ ಇರಬಹುದಾದ ಒಂದೆರಡು ಮರಗಳನ್ನು ನೆಪಮಾತ್ರಕ್ಕೆ ತೋರಿಸಿ, ಇದ್ದಿಲು ಸುಡತಕ್ಕ ಬಗ್ಗೆ ಲೈಸೆನ್ಸು ಪಡೆದುಕೊಂಡು ಅನಂತರ ಅಕ್ಕಪಕ್ಕದ ಜಂಗ್ಲಿಗಳಲ್ಲಿ ಮರಗಳನ್ನು ಕತ್ತರಿಸಿ, ಅವುಗಳನ್ನೇ ತಂದು ತಮ್ಮ ಜಮೀನಿನಲ್ಲಿ ಹಾಕಿಕೊಂಡು ಇದ್ದಿಲನ್ನು ಸುಡತಕ್ಕ ಪದ್ಧತಿ ಬಂದು ಹೋಗಿದೆ. ಆದ್ದರಿಂದ ಮೊದಲು ಹೀಗೆ 5 ಮೈಲಿ ಫಾಸಲೆಯೊಳಗಿರತಕ್ಕವರ್‍ಯಾರಿಗೂ ಇದ್ದಿಲನ್ನು ಸುಡತಕ್ಕ ಬಗ್ಗೆ ಲೈಸೆನ್ಸು ಕೊಡದೆಹೋದರೆ ಕಾಡುಗಳು ಎಷ್ಟೋ ಅಭಿವೃದ್ಧಿಗೆ ಬರಲು ಅವಕಾಶವಾಗುತ್ತದೆ.

ಇನ್ನು ವರ್ಷವರ್ಷವೂ ವನಮಹೋತ್ಸವಕಾಲದಲ್ಲಿ ಲಕ್ಷಾಂತರ ಗಿಡಗಳನ್ನು ನೆಡಲಾಗುತ್ತಿದೆ. ಆದರೆ ಅವುಗಳಿಗೆ ಸರಿಯಾದ ನೀರಿನ ಅನುಕೂಲವಿಲ್ಲ. ಮಳೆ ಕೂಡ ಸಕಾಲದಲ್ಲಿ ಬೀಳದೆ ಎಷ್ಟೋ ಸಸಿಗಳು ಹಾಳಾಗಿಹೋಗಿವೆ. ಬೇಸಿಗೆಯಲ್ಲಿ ನೀರೇ ಇರುವುದಿಲ್ಲ. ಹೀಗಾಗಿ ಅನೇಕ ಮರಗಳು ನಾಶವಾಗಿರುತ್ತವೆ. ಅದಕ್ಕೆ ಬದಲು ಕಾಡುಗಳಲ್ಲೇ ಮರಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕಾದ್ದು ಅತ್ಯಗತ್ಯ ಮತ್ತು ಲಾಭದಾಯಕವಾದುದು.

ಉದಾಹರಣೆ ಹೇಳುವುದಾದರೆ ಕುಣಿಗಲು ತಾಲ್ಲೂಕಿನಲ್ಲಿ 36 ಸಾವಿರ ಎಕರೆಗಳ ಕಾಡಿದೆ. ಅಂಥ ಕಾಡಿನಲ್ಲಿ 36 ಸಾವಿರ ಮರಗಳು ಕೂಡ ಇಲ್ಲ ಎಂದು ಸ್ಪಷ್ಟವಾಗಿ ನೋಡಿರುವುದನ್ನು ಗಮನಕ್ಕೆ ತರುತ್ತೇನೆ. ಅಲ್ಲಿ ಲಾಂಟಾನ ವಿಶೇಷವಾಗಿ ಬೆಳೆದು ಕಾಡು ನಷ್ಟವಾಗುತ್ತಿದೆ. ಇದರಲ್ಲಿ ಗಂಧದ ಮರಗಳು ಬೆಳೆಯಲು ಅವಕಾಶವಿರಬಹುದು. ಆದರೆ ಮೊದಲೇ ರೈತರು ಅದನ್ನೂ ತೆಗೆದುಕೊಂಡು ಹೋಗಿ ಗಂಧದ ಮರ ಬೆಳೆಯುವುದಕ್ಕೂ ಅವಕಾಶವಿಲ್ಲದೆ ನಷ್ಟವಾಗುತ್ತಿದೆ. ಇದನ್ನು ನೋಡಿ ಅಲ್ಲಿ ಹೆಚ್ಚು ಗಿಡಮರಗಳನ್ನು ನೆಡುವುದಕ್ಕೆ ಕೂಡ ಅವಕಾಶ ಮಾಡಿಲ್ಲ ಮತ್ತು ದನಕರುಗಳ ಮೇಯುವುದಕ್ಕೆ ಹುಲ್ಲು ಬನ್ನಿ ಛಾರ್ಜನ್ನು ಕೂಡ ಹಾಕದೆ ಅವಕಾಶ ಮಾಡಿರುವುದರಿಂದ ಮರ ಬೆಳೆಸಲು ಹೆಚ್ಚು ಪ್ರಯತ್ನ ಮಾಡಿದರೂ ಕಾಡು ಅಭಿವೃದ್ಧಿಯಾಗುವುದು ಕಷ್ಟ. ಅದರಿಂದ ಸರ್ಕಾರಕ್ಕೆ ಯಾವ ವಿಧವಾದ ಉತ್ಪತ್ತಿಯೂ ಬರುವುದಿಲ್ಲ. ಬೈಲು ಸೀಮೆಯಲ್ಲಿ ಇರುವ ಕಾಡುಗಳು ಕಡಮೆಯಾಗುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಸೌದೆ ಕಡಿಯುವುದನ್ನು ಅಥವಾ ಇದ್ದಲು ಮಾಡುವುದನ್ನು ನಿಲ್ಲಿಸಿ ಕಾಡುಗಳನ್ನು ಅಭಿವೃದ್ಧಿಮಾಡಿ ಉತ್ಪತ್ತಿಯನ್ನು ಹೆಚ್ಚಿಸಬಹುದು. ಬೈಲು ಸೀಮೆಯಲ್ಲಿ ದಿನೇ ದಿನೇ ಕಡಮೆಯಾಗುತ್ತಿರುವ ಮರಗಳ ಸಂಖ್ಯೆಯನ್ನೂ ಹೆಚ್ಚುಮಾಡಬೇಕಾದ್ದು ಅಗತ್ಯ. ಆದ್ದರಿಂದ ಈ ಖೋತಾ ಸೂಚನೆಯನ್ನು ಸಮರ್ಥನೆ ಮಾಡುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಖೋತಾ ನಿರ್ಣಯದಲ್ಲಿ ಅರಣ್ಯವನ್ನು ಅಭಿವೃದ್ಧಿಪಡಿಸಬೇಕಾದ್ದು ಮುಖ್ಯವೆಂದು ಕಾಣುತ್ತದೆ. ಆದ್ದರಿಂದ ಈಗ ಸರ್ಕಾರದವರು ಅರಣ್ಯವನ್ನು ಅಭಿವೃದ್ಧಿಪಡಿಸುವುದಕ್ಕೆ ಏನು ಕಾರ್ಯಕ್ರಮ ತೆಗೆದು

ಕೊಂಡಿದ್ದಾರೋ ಅದನ್ನು ಇನ್ನೂ ಹೆಚ್ಚು ಮಾಡಿ ಅಭಿವೃದ್ಧಿಪಡಿಸಲು ಹೆಚ್ಚು ಮುತುವರ್ಜಿ ವಹಿಸಬೇಕೆಂದು ಹೇಳಲು ಕೆಲವು ಸೂಚನೆಗಳನ್ನು ಕೊಡುತ್ತೇನೆ. ಸೌದೆಗಾಗಿ ಕಾಡಿನಲ್ಲಿ ಅನೇಕ ಮರಗಳನ್ನು ಅದರಲ್ಲೂ ದಿಂಡಿಗದ ಮರಗಳನ್ನು ಬಹಳವಾಗಿ ನಷ್ಟಮಾಡಿದ್ದಾರೆ. ಮತ್ತು ಬೊಂಬುಗಳನ್ನು ಕೂಡ ಕತರಾಯಿಸುತ್ತಿದ್ದಾರೆ. ಅದರಿಂದ ಕಾಡೆಲ್ಲಾ ಹಾಳಾಗಿ ಸರ್ಕಾರಕ್ಕೆ ಆದಾಯ ಬರುವುದೂ ಕೂಡ ಬಹಳವಾಗಿ ನಿಂತುಹೋಗಿದೆ. ಇಂಥ ಒಂದು ಕೂಗು ಕೇಳಿಬರುತ್ತಿದೆ. ಇದು ಬಹಳ ವಾಸ್ತವವಾಗಿದೆ. ಚಾಮರಾಜನಗರ ಫಾರೆಸ್ಟಿನಲ್ಲಿ ಸೌದೆಗಾಗಿ 12 ಮೈಲಿ ದೂರ ಹೋಗಬೇಕಾಗಿದೆ. ಕ್ಯಾತೆದೇವರ ಗುಡಿಯಾಚೆ ತೇಗದ ಮರ ಬೆಳೆಸುವುದಕ್ಕೆ ಈಗ ಪ್ರಯತ್ನ ಮಾಡಿದ್ದಾರೆ. ಇದರಂತೆ ಬೀಟೆ ಮರಗಳ ಭವಿಷ್ಯವೂ ಕೆಡುತ್ತಿದೆ. ಅವಕ್ಕೂ ಪ್ರಯತ್ನ ಪಡಬೇಕು. ತೇಗದ ಮರ ಮತ್ತು ಬೀಟೆ ಮರಗಳ ಜೊತೆಗೆ ನಮ್ಮ ದೇಶದಲ್ಲಿ ಸಾಲದಿರುವ ಹೊನ್ನೆ ಮತ್ತು ಮತ್ತಿ ಮರಗಳೂ ಜಾಸ್ತಿಯಾಗಬೇಕು. ಈಗ ಇವೆಲ್ಲಾ ಕಣ್ಮರೆಯಾಗುತ್ತಿವೆ. ಆದ್ದರಿಂದ ಈ ಜಾತಿಯ ಮರಗಳಿಗೆ ಹೆಚ್ಚು ನಿಗಾ ಕೊಟ್ಟು ಬೆಳೆಸುವುದಲ್ಲದೆ ತ್ಯಾಗದ ಮರಗಳನ್ನು ವಿಪರೀತವಾಗಿ ಹೆಚ್ಚಿಸಬೇಕು. ಅದೂ ಅಲ್ಲದೆ ಬೆಂಗಳೂರು, ಮೈಸೂರು ಮುಂತಾದ ಪಟ್ಟಣಗಳಲ್ಲಿ ಸೌದೆ ಅಭಾವ ಎಷ್ಟಿದೆಯೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಸೌದೆಗಾಗಿ ಮರಗಳನ್ನು ಕಡಿಯುತ್ತಿದ್ದಾರೆಯೇ ಹೊರತು ಹೊಸದಾಗಿ ಬೆಳೆಸುವುದಕ್ಕೆ ಅಷ್ಟು ನಿಗಾ ಕೊಡುತ್ತಿಲ್ಲ. ತಾನಾಗಿಯೇ ಬೆಳೆದಿರುವುದನ್ನು ಕಡಿಯುತ್ತಿದ್ದಾರೆ. ಬೆಳೆಸಲು ತಕ್ಕ ಕಾರ್ಯಕ್ರಮ ಕೈಗೊಂಡಂತೆ ಕಾಣುತ್ತಿಲ್ಲ. ಸೌದೆಗಾಗಿ ಬೇಕಾದ ಮರಗಳನ್ನು ಬೆಳೆಸುವುದಕ್ಕೆ ಏರ್ಪಾಡು ಮಾಡಬೇಕು. ಇದರಂತೆಯೇ ಬೊಂಬು ಗಳುಗಳನ್ನು ಕೂಡ ಸರಿಯಾಗಿ ಬೆಳೆಸುವುದಕ್ಕೆ ಏರ್ಪಾಡು ಮಾಡಿದರೆ ಕಾಡು ಉಳಿಯುತ್ತದೆ. ಇದಕ್ಕಿಂತ ಹೆಚ್ಚಾಗಿ ಈ ಸಭೆಯ ಗಮನಕ್ಕೆ ತರಬೇಕಾದ ಕೆಲವು ವಿಚಾರಗಳಿವೆ. ಮೈನರ್ ಪ್ರಾಡಕ್ಟ್ಸ್ ಅಂದರೆ ತೊಲೆಗೆ ಬೇಕಾದ ಸಾಗುವಾನಿ ಮರ, ತೇಗ ಮೊದಲಾದುವಲ್ಲದೆ ಅಳಲೇಕಾಯಿ, ಅರಟವಾಳದ ಕಾಯಿ, ಸೀಗೇಕಾಯಿ, ಹೊಂಗೆ, ಹಿಪ್ಪೆ ಮರಗಳನ್ನು ವೃದ್ಧಿ ಮಾಡಬೇಕು. ಈಗ ಸೌದೆ ಕಡಿಯುವ ನೆಪದಲ್ಲಿ ಇದಕ್ಕೆ ಸಂಬಂಧಿಸಿದ ಗಿಡಗಳನ್ನೂ ಕಡಿದು ಅನೇಕ ಕಡೆ ಸಾಗಿಸುತ್ತಿದ್ದಾರೆಂದು ಗೊತ್ತಾಗಿದೆ. ಅಳಲೇಕಾಯಿ ಬಹಳ ಮುಖ್ಯವಾದ ವಸ್ತು. ಅದರ ಉತ್ಪತ್ತಿ ದಿನೇ ದಿನೇ ಕಡಮೆಯಾಗುತ್ತಿದೆ. ಗಂಧದ ಮರ ಕಡಿಯದ ಹಾಗೆ ಪ್ರತಿಬಂಧಕ ಮಾಡಿರುವಂತೆ ಅಳಲೇಕಾಯಿ ಗಿಡ, ಹೊಂಗೆ ಮರ ಮುಂತಾದುವನ್ನೂ ಕಡಿಯದಂತೆ ನಿರ್ಬಂಧಪಡಿಸಬೇಕು. ಮತ್ತು ಮೈನರ್ ಪ್ರಾಡಕ್ಟ್ಸ್ ಹೆಚ್ಚಾಗಿ ಉತ್ಪತ್ತಿಯಾಗುವ ಹಾಗೆ ಪ್ರಯತ್ನಪಡಬೇಕು. ಅಳಲೇಕಾಯಿ ಔಷಧಿಗೆ ಉಪಯೋಗವಾಗುತ್ತದೆ. ಅಳಲೇಕಾಯಿ ಮರಗಳು ಉದ್ಬೂರು ಕಾವಲಿನಲ್ಲಿ 2–3 ಸಾವಿರ ಮರಗಳವರೆಗೆ ಇದ್ದುವು. ಹೆಚ್ಚು ಆಹಾರ ಬೆಳೆಯುವ ಯೋಜನೆ ಜಾರಿಗೆ ಬಂದಾಗ ಈ ಗಿಡಗಳೆಲ್ಲಾ ನಷ್ಟವಾಗಿವೆಯೆಂದು ಸುತ್ತಮುತ್ತಲೂ ಇರುವವರು ದೂರು ಕೊಟ್ಟರು. ಹೀಗೆ ಆಗಿದ್ದರೆ ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯವಾಗಿ ಮಾಡುವ ಸಂದರ್ಭದಲ್ಲಿ ಎಲ್ಲಿ ಸಾಧ್ಯವೋ ಅಲ್ಲಿ ಈ ಗಿಡಗಳನ್ನು ಉಳಿಸಿದ್ದರೆ ಚೆನ್ನಾಗಿತ್ತು ಮತ್ತು ಇರುವ ಗಿಡಗಳನ್ನು ಕಡಿಯಬಾರದಾಗಿತ್ತು. ಈ ರೀತಿಯಾಗಿ ಮೈನರ್ ಪ್ರಾಡಕ್ಟ್ಸ್ ಕಾಪಾಡುವುದು ಬಹಳ ಮುಖ್ಯವಾದ ಕರ್ತವ್ಯ. ನಮ್ಮ ಆದಾಯದ ದೃಷ್ಟಿಯಿಂದಲೂ ಇದು ಬಹಳ ಮುಖ್ಯ.

ಮತ್ತೊಂದು ವಿಚಾರ. ನಮ್ಮ ದೇಶದಲ್ಲಿ ಈಗ ಬೀಡಿ ಕಾರ್ಖಾನೆಗಳು ಬಹಳ ಹೆಚ್ಚಿವೆ, ಅವಕ್ಕೆ ಬೇಕಾದ ತೂಬಿನ ಎಲೆ ನಮ್ಮ ಅರಣ್ಯದಲ್ಲಿ ಸಾವಿರಾರು ಎಕರೆಗಳಲ್ಲಿ ಬೆಳೆಸಿದ್ದರೆ ಬಹಳವಾಗಿ ಉತ್ಪತ್ತಿ ಬರುತ್ತಿತ್ತು. ಈಗ ಆ ಎಲೆಗಳು ಹೈದರಾಬಾದು ಕಡೆಯಿಂದ ಬೇಕಾದಷ್ಟು ಬರುತ್ತಿವೆ. ಹಾಗಿರುವಾಗ ಇದಕ್ಕೆ ಏಕೆ ಉತ್ತೇಜನ ಕೊಟ್ಟಿಲ್ಲ ಎಂಬುದು ಅರ್ಥವಾಗುವುದಿಲ್ಲ. ಇದನ್ನು ಪ್ಲಾಂಟೇಷನ್ ರೀತಿಯಲ್ಲಿ ಬೆಳೆಸುವುದಾದರೆ ಲಕ್ಷಾಂತರ ರೂಪಾಯಿಗಳು ನಮ್ಮ ದೇಶವನ್ನು ಬಿಟ್ಟು ಹೋಗುತ್ತಿರುವುದು ನಮ್ಮಲ್ಲೇ ನಿಲ್ಲುತ್ತದೆ. ಇದನ್ನು ಬೆಳೆಸುವುದು ಸುಲಭ. ಆದರೆ ಇದರ ಮೇಲೆ ಅಷ್ಟಾಗಿ ನಿಗಾ ಕೊಟ್ಟಿಲ್ಲ.

ಜನಾಬ್ ಮಹಮದ್ ಷರೀಫ್‌ರವರು (ಮೈಸೂರು, ಮಂಡ್ಯ ಮತ್ತು ಹಾಸನ—ಮುಸ್ಲಿಂ).—ಅದಕ್ಕೆ ಸಾಯಿಲ್ ಸರಿಯಾಗಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಇದನ್ನು ತಜ್ಞರಲ್ಲಿ ವಿಚಾರ ಮಾಡಿ ಅರಣ್ಯದಲ್ಲೂ ಮತ್ತು ಬಾಕಿ ಕಡೆ ಎಲ್ಲಿ ಸಾಧ್ಯವೋ ಅಲ್ಲೂ ಬೆಳೆಯಲು ಏರ್ಪಾಡು ಮಾಡಬೇಕು.

ಮತ್ತೊಂದು ವಿಚಾರದಲ್ಲಿ ನಾನು ಒಂದು ಪ್ರಶ್ನೆ ಕಳುಹಿಸಿದ್ದೆ. ಕಾರಣಾಂತರದಿಂದ ಅದಕ್ಕೆ ಉತ್ತರ ಬರಲಿಲ್ಲ. ಗೋಡಂಬಿ ಅಥವಾ ಗೇರುಪೊಪ್ಪಿನ ಗಿಡವು ಎಂಥ ಭೂಮಿಯಲ್ಲಾದರೂ ಬೆಳೆಯುತ್ತದೆ. ಅದನ್ನು ಅಭಿವೃದ್ಧಿ ಮಾಡಬೇಕಾದರೆ ಎರಡು ವರ್ಷಗಳು ಕಾಪಾಡಿದರೆ ಸಾಕು. ಕಾಡಿನಲ್ಲಿ ಮಾತ್ರವಲ್ಲ, ನಿರ್ಜನ ಪ್ರದೇಶದಲ್ಲೂ ಪಾಳು ಭೂಮಿಯಲ್ಲೂ, ವ್ಯವಸಾಯಕ್ಕೆ ನಾಲಾಯಖ್ಖಾದ ಭೂಮಿಯಲ್ಲೂ ಬೆಳೆಯುತ್ತೆ. ಇದಕ್ಕೆ ಉತ್ತೇಜನ ಕೊಟ್ಟರೆ ದೇಶದ ಸಂಪತ್ತು ಬಹಳವಾಗಿ ಅಭಿವೃದ್ಧಿಯಾಗುತ್ತದೆ. ಈಗ ಬಾದಾಮಿ ಕಡಮೆಯಾದಮೇಲೆ ಗೋಡಂಬಿ ಉಪಯೋಗ ಎಷ್ಟು ಹೆಚ್ಚಿದೆ ಎಂಬುದು ಸರ್ವರಿಗೂ ಗೊತ್ತು. ಆದರೆ ಇದನ್ನು ಬೆಳೆಯುವುದಕ್ಕೆ ಏಕೋ ಪ್ರಯತ್ನಪಟ್ಟಿಲ್ಲ. ತಲಕಾಡಿನಲ್ಲಿ ಕೆಲವು ಗಿಡ ಹಾಕಿದ್ದಾರೆ. ಒಂದೊಂದು ಗಿಡದಲ್ಲಿ 4 ಖಂಡುಗ, 8 ಖಂಡುಗ ಬೀಜ ಉತ್ಪತ್ತಿಯಾಗುತ್ತೆ. ಇದರ ಜೊತೆಗೆ ಬಣ್ಣದ ಸಾಮಾನು ಮಾಡುವ ಆಲೆ ಗಿಡ ಬೆಳೆಸಬಹುದು.

ಗೋಡಂಬಿ ವ್ಯವಸಾಯ, ಬೀಡಿಗೆ ಕಟ್ಟುವ ಎಲೆ ಮುಂತಾದ ಚಿಕ್ಕ ಚಿಕ್ಕ ಬಾಬುಗಳಿಗೆ ಹೆಚ್ಚು ಗಮನ ಕೊಟ್ಟರೆ ಇದರಿಂದ 22 ಸಾವಿರ ರೂಪಾಯಿ ಉತ್ಪನ್ನ ಬರುತ್ತದೆಂದು ಹೇಳುತ್ತೇನೆ. ರಬ್ಬರ್ ಗಿಡಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬೆಳೆಸುವುದಕ್ಕೆ ಪ್ರಯತ್ನಪಡಬೇಕು. ಸರ್ವತೋಮುಖವಾಗಿ ಅಭಿವೃದ್ಧಿಯಾಗಬೇಕಾದರೆ ಮಾನ್ಯ ಸಚಿವರ ಇಲಾಖೆಯಲ್ಲಿರತಕ್ಕ ದಕ್ಷರನ್ನೆಲ್ಲಾ ಸೇರಿಸಿ ಈ ವಿಚಾರಕ್ಕೆ ಹೆಚ್ಚು ಗಮನ ಕೊಡಬೇಕೆಂದು ಸೂಚಿಸುತ್ತೇನೆ.

Mr. SPEAKER.—The House will now rise for lunch and re-assemble after half an hour.

The Assembly adjourned for Lunch at Thirty-Two Minutes past Three of the Clock and re-assembled at Six Minutes past Four of the Clock, Mr. Speaker. (The Hon'ble Sri V. Venkatappa) in the Chair.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಸಂಸ್ಥಾನದ ಅರಣ್ಯ ಸಂಪತ್ತನ್ನು ಅಭಿವೃದ್ಧಿ ಪಡಿಸುವುದಕ್ಕೆ ಅವಶ್ಯಕತೆ ಹೆಚ್ಚಾಗಿದೆ ಎಂದು ಈ ಸಂದರ್ಭದಲ್ಲಿ ನಾನು ಸೂಚಿಸಲು ಬಯಸುತ್ತೇನೆ. ಈಗಾಗಲೇ ಈ ವಿಷಯದ ಮೇಲೆ ಮಾತನಾಡಿರತಕ್ಕ ಮಾನ್ಯ ಸದಸ್ಯರು ನಮ್ಮ ಸಂಸ್ಥಾನದಲ್ಲಿ ಅರಣ್ಯಗಳಿರತಕ್ಕ ಪರಿಸ್ಥಿತಿಯನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಈ ವಿಷಯದಲ್ಲಿ ನಾನು ಹೆಚ್ಚಾಗಿ ಮಾತನಾಡದೆ ಒಂದು ನಿದರ್ಶನವನ್ನು ಮಾತ್ರ ಕೊಟ್ಟು ಮುಂದಿನ ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಚಿತ್ರದುರ್ಗದಿಂದ ಮೊಳಕಾಲ್ಮುರುವಿಗೆ ಹೋಗುವಾಗ ಚಳ್ಳಕೆರೆ, ಮೊಳಕಾಲ್ಮುರುವಿಗೆ ಮಧ್ಯೆ ದಟ್ಟವಾದ ಕಾಡಿದ್ದು ಮರಗಳು ರಸ್ತೆಯ ಅಕ್ಕಪಕ್ಕದಲ್ಲಿ ತುಂಬ ನಿಂತಿರುವ ಒಳ್ಳೆಯ ಸುಂದರವಾದ ಕಮರದ ಮರಗಳನ್ನು ನೋಡುತ್ತಾ ಇದ್ದೆವು. ಈಚೆಗೆ ಇಲ್ಲಿ ಇದ್ದಲು ಮಾಡುವುದಕ್ಕೆ ಅವಕಾಶ ಕೊಟ್ಟು ಆ ಮರಗಳನ್ನು ಬುಡಬಿಟ್ಟು ಕೊಂಬೆಗಳನ್ನೆಲ್ಲಾ ಕಡಿದುಹಾಕಿರುವುದನ್ನೂ ನೋಡಿದ್ದೇನೆ. ಅದನ್ನು ನೋಡಿದಾಗಲೆಲ್ಲಾ ಹೇಗೆ ಅನ್ನಿಸುತ್ತದೆಂದರೆ ಜನಗಳ ಮುಂಡವನ್ನು ತುಂಡುಹಾಕಿ ರುಂಡಗಳನ್ನು ನಿಲ್ಲಿಸಿದರೆ ಹೇಗೆ ಕಾಣುತ್ತದೆಯೋ ಹಾಗೆ ಕಾಣುವಂತೆ ಭಾಸವಾಗುತ್ತದೆ. ಕಮರದ ಗಿಡ ಅತಿ ಉಪಯುಕ್ತವಾದುದು. ಇದನ್ನು ಅರಣ್ಯ ಮಂತ್ರಿಗಳ ಗಮನಕ್ಕೆ ಹೋದವರ್ಷ ತಂತಿಗಳ ಮೂಲಕ, ನಿಯೋಗಗಳ ಮೂಲಕ ತಂದು ಇದ್ದಲು ಮಾಡುವುದನ್ನು ಹತೋಟಿಗೆ ತಂದರು. ಈಗ ಆ ಕಾಡು ಸ್ವಲ್ಪ ಉತ್ತಮವಾಗುತ್ತಾ ಇದೆ. ಈ ಅರಣ್ಯಗಳು ಶೋಚನೀಯ ಪರಿಸ್ಥಿತಿಯಲ್ಲಿರದೆ, ಜೊತೆಗೆ ಒಳ್ಳೆಯ ಅರಣ್ಯಗಳು ಉತ್ಪನ್ನವಾಗಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ. ಈ ಅರಣ್ಯಗಳಿಂದ ಪ್ರತ್ಯಕ್ಷವಾದ ಪ್ರಯೋಜನ ಕೆಲವು ಉಂಟು. ಅಪ್ರತ್ಯಕ್ಷವಾದ ಪ್ರಯೋಜನ ಕೆಲವು ಉಂಟು. ಪ್ರತ್ಯಕ್ಷವಾದ ಪ್ರಯೋಜನ ಮರಮುಟ್ಟು, ಹಣ್ಣುಹಂಪಲು ವಗೈರೆ ಬರತಕ್ಕದ್ದು. ಇವುಗಳ ಜೊತೆಗೆ ನಮಗೆ ಇನ್ನೂ ದೊರೆಯಬಹುದಾದ ಪ್ರಯೋಜನಗಳು ಯಾವು ಯಾವೆಂಬುದನ್ನು ಮಾನ್ಯ ಮಿತ್ರರಾದ ಶ್ರೀ ರಂಗ. ರಾಮಯ್ಯನವರು ವಿಶದವಾಗಿ ಈ ಸಭೆಯ ಮುಂದಿಟ್ಟಿದ್ದಾರೆ. ಈ ವಿಷಯದಲ್ಲಿ ಸರ್ಕಾರದವರಿಗೆ ಒಂದು ಸಲಹೆ ಕೊಡಲು ಬಯಸುತ್ತೇನೆ. ಅರಣ್ಯಗಳಲ್ಲಿ ವೃಕ್ಷಗಳನ್ನು ಬೆಳೆಸುವುದಕ್ಕೆ ಅದರಲ್ಲೂ ಉಪಯುಕ್ತವಾದ ವೃಕ್ಷಗಳನ್ನು ಬೆಳೆಸುವುದಕ್ಕೆ ಹೆಚ್ಚು ನಿಗಾ ಕೊಡಬೇಕು. ಉದಾಹರಣೆಗೆ ಅಳಲೆಕಾಯಿ ಗಿಡ ತೆಗೆದುಕೊಂಡರೆ, ಅಳಲೇಕಾಯಿಯ ಬೀಜದಿಂದ ಸಸಿ ಮಾಡುವುದು ಸಾಮಾನ್ಯವಾಗಿ ಅರಣ್ಯ ಇಲಾಖೆಯವರಿಗೆ ಚೆನ್ನಾಗಿ ತಿಳಿಯದು ಎಂದು ಹೇಳಬಹುದು. ಅನೇಕ ಜನಗಳು ಅಂಥಾ ಸಸಿಗಳು ಬೇಕೆಂದು ಅಪೇಕ್ಷಿಸುತ್ತಾರೆ. ಆದ್ದರಿಂದ ನರ್ಸರಿಗಳಲ್ಲಿ ಆ ಸಸಿಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನು ಅಪ್ರತ್ಯಕ್ಷವಾಗಿ ಅರಣ್ಯಗಳಿಂದ ಆಗಿರತಕ್ಕ ಪ್ರಯೋಜನವನ್ನು ಕುರಿತು ಈ ಸಂದರ್ಭದಲ್ಲಿ ಮಾತನಾಡಬೇಕೆಂದಿದ್ದೇನೆ. ಅರಣ್ಯಗಳು ಹೆಚ್ಚಾಗಿದ್ದರೆ ಹೆಚ್ಚಾಗಿ ಮಳೆ ಬರುತ್ತದೆ ಎಂಬುದು ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಅರಣ್ಯ ಹೆಚ್ಚಾಗಿದ್ದರೆ ವೃಕ್ಷಗಳು ಅದರ ಮೇಲೆ ಇರತಕ್ಕ ವಾತಾವರಣವನ್ನು ತಂಪುಗೊಳಿಸಿ, ಆಕಾಶದಲ್ಲಿ ಚಲಿಸತಕ್ಕ ಮೋಡಗಳನ್ನು ಆಕರ್ಷಣೆ ಮಾಡಿ ಮಳೆ ಸುರಿಯುವುದಕ್ಕೆ ಅವಕಾಶ ಮಾಡಿಕೊಡುತ್ತವೆ. ನಮ್ಮ ಅರಣ್ಯಗಳು ಕೆಡುತ್ತಾ ಕೆಡುತ್ತಾ ಹೆಚ್ಚು ಮಳೆಬರುವ ಅವಕಾಶವನ್ನು ಕಳೆದುಕೊಳ್ಳುತ್ತಾ ಇದ್ದೇವೆ ಎಂಬುದನ್ನು ಮತ್ತೆ ಒತ್ತಿ ಹೇಳಬೇಕಾಗಿಲ್ಲ.

ಅರಣ್ಯಗಳಿಂದಾಗತಕ್ಕ ಇನ್ನೊಂದು ಅನುಕೂಲವೇನೆಂದರೆ, ದಟ್ಟವಾದ ಅರಣ್ಯಗಳಿದ್ದರೆ ಮಳೆ ಬಂದಾಗ ನೀರು ಹರಿದು ಭೂಮಿಯನ್ನು ಕೊಚ್ಚಿಕೊಂಡು ಹೋಗಿ ಫಲವತ್ತಾದ ಭೂಪ್ರದೇಶವನ್ನೆಲ್ಲಾ ಎಲ್ಲೋ ನದಿಗೋ ಸಮುದ್ರಕ್ಕೋ ಸೇರಿಸಿ ನಷ್ಟವಾಗುವುದು, ಮಟ್ಟವಾದ ಭೂಮಿಯನ್ನು ಕೊರೆಯುವುದು ತಪ್ಪುತ್ತದೆ. Soil erosion ನ್ನನ್ನು ತಡೆದು ಭೂಮಿಯ ಫಲವತ್ತಾದ ಭಾಗವನ್ನು ಹೋಗದಂತೆ ತಡೆದು ಕಾಪಾಡುತ್ತದೆ. ಅಲ್ಲದೆ ಅರಣ್ಯಗಳಿರತಕ್ಕ ಕಡೆ ಎಲೆ ಮುಂತಾದುವು ಕೆಳಗೆ ಬಿದ್ದು ಒಂದು organic manure ನಮಗೆ ಸುಲಭವಾಗಿ ದೊರಕುವಂತಾಗುತ್ತದೆ. ಇದರಿಂದ ಆ ಅರಣ್ಯಗಳ ಸುತ್ತಮುತ್ತಣ ಪ್ರದೇಶ ಫಲವತ್ತಾಗುವುದಕ್ಕೆ ಅವಕಾಶವಾಗುತ್ತದಲ್ಲದೆ, ಆ ಸುತ್ತಮುತ್ತ ಪ್ರದೇಶಗಳ ಮೇಲೆ ಈ ಗೊಬ್ಬರದ ನೀರು ಹರಿದು ಹೋಗಿ ಆ ಭೂಮಿಯ ಸಾರವನ್ನೂ ಹೆಚ್ಚಿಸುತ್ತದೆಂದು ಶಾಸ್ತ್ರಜ್ಞರು ಹೇಳುತ್ತಾರೆ.

ಆದ್ದರಿಂದ ಅರಣ್ಯಗಳಿರುವುದು ಭೂಮಿಯನ್ನು ಫಲವತ್ತು ಮಾಡುವುದಕ್ಕೂ ಮತ್ತು ಫಲವತ್ತಾದ ಭೂಪ್ರದೇಶವನ್ನು ಹಾಗೆಯೇ ಇರುವಂತೆ ಕಾಪಾಡಿ ಸಹಾಯ ಮಾಡುವುದಕ್ಕೆ ಈ ಎರಡು ದೃಷ್ಟಿಯಿಂದಲೂ ಅರಣ್ಯಗಳನ್ನು ಹೆಚ್ಚಾಗಿ ಬೆಳೆಸುವುದು ಮತ್ತು ಕಾಪಾಡುವುದು ಅವಶ್ಯಕವಾಗಿದೆ. ದೇಶದ ಆರ್ಥಿಕ ಸಂಪತ್ತಿಗೆ ಇದು ಬಹಳ ಮುಖ್ಯವಾದುದು. ಪ್ರತ್ಯಕ್ಷವಾಗಿ ಅರಣ್ಯಗಳಿಂದ ಎಷ್ಟು ಲಾಭ ಆಗುತ್ತದೋ ಅದಕ್ಕಿಂತಲೂ ಅಪ್ರತ್ಯಕ್ಷವಾಗಿ ಇನ್ನೂ ಸಾವಿರ ಪಾಲು ಹೆಚ್ಚಿಗೆ ಲಾಭ ಆಗುತ್ತದೆ.

ನಾವು ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ, ಅರಣ್ಯಗಳು ಈಗ ಹಾಳಾಗುತ್ತಿರುವುದರಿಂದ ಅಲ್ಲಿನ ಫಲಪುಷ್ಪಾದಿಗಳ ಮೇಲೆ ಕಾಡಿನಲ್ಲಿ ಜೀವಿಸುವ ಪ್ರಾಣಿಗಳಿಗೆ ಆಹಾರವಿಲ್ಲದಂತಾಗಿ ಈಗ ಅವು ಊರುಗಳಕಡೆಗೆ ತಿರುಗುತ್ತಿವೆ. ಕೋತಿಗಳ ಹಾವಳಿ ಜಾಸ್ತಿಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕಾಡುಗಳು ಬರಿದಾಗಿ ಮೊದಲಿನಂತೆ ಹಣ್ಣು ಹಂಪಲುಗಳು ಸಿಕ್ಕದಂತಾಗಿ ಅವೂ ಊರುಗಳಿಗೇ ಬರುತ್ತಿವೆ. ಎಲ್ಲೋ ಒಂದುಕಡೆ ಹಾವುಗಳ ಹಿಂದುಹಿಂಡೇ ಊರು ಕಡೆ ಹೋಗುತ್ತಿತ್ತೆಂದು ಪತ್ರಿಕೆಗಳಲ್ಲಿ ಓದಿ ಕೇಳಿದ್ದೇನೆ. ಇದೇನೂ ಅಸಂಭವವಲ್ಲ. ನಮ್ಮ ಕಡೆ ಹುಲಿಗಳ ಹಾವಳಿ ಜಾಸ್ತಿಯಾಗುತ್ತದೆ. ಈ ರೀತಿಯಾಗಿ ಕಾಡುಮೃಗಗಳು ಊರಿಗೆ ಬಂದು ಪೈರುಗಳಿಗೂ ಜನ ಜಾನುವಾರುಗಳಿಗೂ ತೊಂದರೆಯುಂಟುಮಾಡುತ್ತಿವೆ. ಆದ್ದರಿಂದ ಅರಣ್ಯಗಳಿಂದ ಕಾಡುಪ್ರಾಣಿಗಳೂ ವೃದ್ಧಿಯಾಗಿ ದೇಶದ ಸಂಪತ್ತು ಹೆಚ್ಚುವುದಲ್ಲದೆ ಜನರಿಗೂ ತೊಂದರೆಯಾಗುವುದಿಲ್ಲ. ಆದ್ದರಿಂದ ಆದಷ್ಟುಮಟ್ಟಿಗೂ ಅರಣ್ಯಗಳನ್ನು ಕಾಪಾಡುವುದಕ್ಕೂ ಮತ್ತು ವೃದ್ಧಿಮಾಡುವುದಕ್ಕೂ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಸರ್ಕಾರದವರಿಗೆ ವಿನಂತಿ ಮಾಡಿಕೊಳ್ಳುತ್ತಾ ಈ ಖೋತಾ ಸೂಚನೆಯನ್ನು ಸಮರ್ಥಿಸುತ್ತೇನೆ.

*ಶ್ರೀ ಎಚ್. ಎಂ ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಸದಸ್ಯರು ಅರಣ್ಯದ ವಿಚಾರದಲ್ಲಿ ತಂದಿರತಕ್ಕ ಖೋತಾ ಸೂಚನೆಯ ಮೇಲೆ ನಾನು ಒಂದೆರಡು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ.

* Speeches asterisked have not been revised by the Hon'ble Members concerned.

ಅರಣ್ಯ ಸಂಪತ್ತನ್ನು ಹೆಚ್ಚಿಸಬೇಕು ಮತ್ತು ಇನ್ನೂ ಚೆನ್ನಾಗಿ ಅವುಗಳನ್ನು ಕಾಪಾಡಿಕೊಂಡು ಬರಬೇಕೆಂಬ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಜನಗಳ ಮೇಲೆ ತೆರಿಗೆಯ ಹೊರೆಯನ್ನು ಹಾಕದೇನೇ ದೇಶದ ಉತ್ಪತ್ತಿಯನ್ನು ಹೆಚ್ಚಿಸತಕ್ಕ ವಿಧಾನಗಳಲ್ಲಿ ಒಂದಾದ ಈ ಅರಣ್ಯ ಸಂಪತ್ತನ್ನು ವೃದ್ಧಿಮಾಡುವುದು ಬಹಳ ಮುಖ್ಯವಾದ್ದು. ಅನೇಕ ವರ್ಷಗಳ ಹಿಂದಿನಿಂದಲೂ ಇದ್ದ ಈ ಸಂಪತ್ತು ಈಗ ನಮಗೆ ಬೇಕಾದಷ್ಟು ಹಣ ಕೊಡುತ್ತಿದೆ. ಸುಮಾರು 11 ಲಕ್ಷ ರೂಪಾಯಿಗಳು ಇದರಿಂದ ವರಮಾನ ಬರುತ್ತದೆಂದು ಇಂದು ನಿರೀಕ್ಷಣೆ ಮಾಡಲಾಗಿದೆ. ಆದರೆ ಇತ್ತೀಚೆಗೆ ಅರಣ್ಯ ಸಂಪತ್ತನ್ನು ವೃದ್ಧಿಮಾಡತಕ್ಕ ಕಾರ್ಯಕ್ರಮದಲ್ಲಿ ನಮ್ಮ ಚಟುವಟಿಕೆಗಳು ಸಾಲದೆಂಬ ಭಾವನೆ ಅನೇಕರಲ್ಲಿ ಮೂಡುತ್ತಿದೆ ಮತ್ತು ಹೆಚ್ಚುತ್ತಲೂ ಇದೆ.

ವೃದ್ಧಿ ಮಾಡುವುದೆಂದರೆ ಎರಡು ವಿಧಾನದಲ್ಲಿ ಮಾಡಬಹುದು. ಇರತಕ್ಕ ಪದಾರ್ಥಗಳನ್ನು ಸದ್ವಿನಿಯೋಗ ಮಾಡುವುದು ಒಂದು. ಇನ್ನೊಂದು, ಹೊಸದಾಗಿ ಸಂಪತ್ತನ್ನು ವೃದ್ಧಿಮಾಡುವುದು. ಇರತಕ್ಕ ಅರಣ್ಯ ಸಂಪತ್ತನ್ನ ಪೋಲಾಗದಂತೆ ನೋಡಿಕೊಳ್ಳುವುದೂ ಒಂದು ಮುಖ್ಯವಾದ ಕೆಲಸ. ಇದರ ವಿಷಯದಲ್ಲಿ ಎಷ್ಟುಬೇಕಾದರೂ ಮಾತನಾಡಬಹುದು. ಒಟ್ಟಿನಲ್ಲಿ ಹೇಳುವುದಾದರೆ ಈಗ ನಾವು ನಮ್ಮ ಈ ಸಂಪತ್ತನ್ನು ಪೋಲಾಗದಂತೆ ನೋಡಿಕೊಳ್ಳತಕ್ಕ ನೀತಿ ಅಷ್ಟು ಸಾಲದೆಂದು ಹೇಳಬೇಕಾಗಿದೆ. 1948ನೆಯ ಇಸವಿಯ ಜನವರಿ ಒಂದನೇ ತಾರೀಖಿನ ದಿವಸ ಮಾನ್ಯ ಸಚಿವರಾದ ಶ್ರೀ [illegible] ದಾಸಪ್ಪನವರೇ ನಮ್ಮ ಅರಣ್ಯ ಸಂಪತ್ತು ಎಷ್ಟರಮಟ್ಟಿಗೆ ಪೋಲಾಗುತ್ತಿದೆಯೆಂಬುದನ್ನು ಕಣ್ಣಾರ ನೋಡಿ ಆನಂದಿಸಿದ್ದಾರೆ !!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹಳೇ ಕಾಲದ ಮಾತು !!

ಒಬ್ಬ ಸದಸ್ಯರು.—ಆನಂದಿಸಿದರೇ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹೌದು, ಹೀಗೆ ಆಗುತ್ತಿರುವುದನ್ನು ಕಂಡುಹಿಡಿದೆವಲ್ಲಾ ಎಂಬ ಸಂತೋಷವೂ ಆಯಿತು. ಈ ರೀತಿಯಾಗಿ ಪೋಲಾಗುವುದರಿಂದ ನಮ್ಮ ಉತ್ಪತ್ತಿ ಕಮ್ಮಿಯಾಗುತ್ತಿರುವುದಲ್ಲದೆ ನಮ್ಮ ಅರಣ್ಯ ಸಂಪತ್ತು ಧಾರಾಕಾರವಾಗಿ ತಪ್ಪುದಾರಿಯಲ್ಲಿ ಹೋಗುತ್ತಿದೆ. ನಾನೂ ಕೂಡ ಇತ್ತೀಚೆಗೆ ಈ ಅರಣ್ಯ ಸಂಪತ್ತು ಪೋಲಾಗುವುದನ್ನು ಪತ್ತೆ ಹಚ್ಚುವುದರಲ್ಲಿ ಸ್ವಲ್ಪಮಟ್ಟಿಗೆ ನನ್ನ ಚಟುವಟಿಕೆ ಕಡಿಮೆ ಮಾಡಿದ್ದೇನೆ.

ಒಬ್ಬ ಸದಸ್ಯರು.— ಅರಣ್ಯ ರೋದನವೆಂತಲೋ!

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೇ ಹೇಳಬಹುದು. ಈಗಲೂ ಕೂಡ ನಾನು ಸರ್ಕಾರದವರಿಗೆ ಸೂಚನೆ ಕೊಡುವುದು ಇಷ್ಟೇ. ಅರಣ್ಯ ಸಂಪತ್ತು ಪೋಲಾಗುತ್ತಿಲ್ಲವೆಂದು ನೀವು ನಂಬಿಕೊಂಡಿದ್ದರೆ ಅಥವ ಆ ಪ್ರಮಾಣದಲ್ಲಿ ಪೋಲಾಗುತ್ತಿಲ್ಲವೆಂದು ನೀವು ನಂಬಿದ್ದರೆ ಅದು ಖಂಡಿತ ತಪ್ಪು. ಈಗ ಯಾರೂ ಅವರನ್ನು ಹಿಡಿದುಕೊಂಡು ಬಂದು ನಿಮ್ಮ ಮುಂದೆ ತರುತ್ತಿಲ್ಲ ಅಷ್ಟೇ. ನಿಜವಾಗಿಯೂ ಅದನ್ನು ಕಂಡುಹಿಡಿಯುವುದು ಬಹಳ ಕಷ್ಟ. ಎಲ್ಲಾ ಅರಣ್ಯದ ವಿಚಾರದಲ್ಲಿಯೂ ಸಂಬಂಧಪಟ್ಟ ಅಧಿಕಾರಿಗಳು ಮಾಡತಕ್ಕ ಕೆಲಸ ಕಾರ್ಯಗಳನ್ನು ನೋಡುವುದು, ಅದನ್ನು ಪರಿಶೀಲನೆ ಮಾಡುವುದು ಬಹಳ ಕಷ್ಟ. ಅವೆಲ್ಲಾ ಅರಣ್ಯದ ಪಕ್ಕದಲ್ಲೇ ವಾಸಮಾಡುವ ಜನಗಳಿಗೆ ಗೊತ್ತಾಗುವುದೇ ವಿನಾ ಬಾಕಿಯವರಿಗೆ ಗೊತ್ತಾಗುವುದಿಲ್ಲ. ಅರಣ್ಯದೊಳಗೆ ಏನೇನು ನಡೆಯುತ್ತಿದೆಯೆಂದು ಪತ್ತೆ ಹಚ್ಚಬೇಕಾದರೆ ವಿಶೇಷ ಸಿಬ್ಬಂದಿಯೇ ಬೇಕು. ಆ ಸಿಬ್ಬಂದಿ ಯಾರೆಂಬುದೂ ಪತ್ತೆಯಾಗದಂತಿರಬೇಕು. ಹಾಗಿಲ್ಲದೆ ಇರತಕ್ಕ ಸಿಬ್ಬಂದಿಯಿಂದಲೇ ನಮ್ಮ ಅರಣ್ಯವನ್ನು ಭದ್ರವಾಗಿ ನೋಡಿಕೊಂಡು ಹೋಗುತ್ತೇವೆಂದು ಹೇಳಿದರೆ ಅದು ಅಷ್ಟು ಸಮರ್ಪಕವಾಗುವುದಿಲ್ಲ. ಸಾರ್ವಜನಿಕರಿಂದ ಬರತಕ್ಕ ಸೂಚನೆಗಳನ್ನು ಕಾತುರತೆಯಿಂದ ಕಾದು ನೋಡಿ ಅವುಗಳನ್ನು ಆಗಲೇ ಪತ್ತೆ ಹಚ್ಚುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದರೆ ನೀವೆಷ್ಟು ಹಣ ಬರುತ್ತದೆಯೆಂದು ನಿರೀಕ್ಷಣೆ ಮಾಡುತ್ತಿದ್ದೀರೋ ಅಷ್ಟೂ ಬರುವುದಿಲ್ಲ. ಹಾಗಿಲ್ಲದೆ ನಾನು ಹೇಳಿದಂತೆ ಹೆಚ್ಚಿಗೆ ಕಾರ್ಯಕ್ರಮ ತೆಗೆದುಕೊಂಡರೆ ಇನ್ನೂ 40-50 ಲಕ್ಷ ರೂಪಾಯಿಗಳು ಬರುತ್ತವೆಂದು ಹೇಳಬಲ್ಲೆ.

ಇನ್ನು ಅರಣ್ಯ ಸಂಪತ್ತನ್ನು ಹೆಚ್ಚು ಮಾಡಿಕೊಳ್ಳುವ ವಿಷಯದಲ್ಲಿ ತಾವು ಈಗ ಕೈಕೊಂಡಿರತಕ್ಕ ಕಾರ್ಯಕ್ರಮ, ನೀವು ನಡೆಸುತ್ತಿರತಕ್ಕ ಕಾರ್ಯ ಚಟುವಟಿಕೆ ಖಂಡಿತ ಸಾಲದು. ಈಗ ನಮ್ಮ ಅರಣ್ಯ ಸಂಪತ್ತು ಎಷ್ಟುಮಟ್ಟಿಗೆ ಕ್ಷೀಣಿಸುತ್ತಿದೆಯೆಂಬುದನ್ನು ಹೇಳತೀರದು. ವರ್ಷವರ್ಷವೂ ಇಷ್ಟು ಮರಮುಟ್ಟುಗಳನ್ನು ನಾವು ತೆಗೆದುಕೊಳ್ಳುತ್ತಿರುವಾಗ ಅವುಗಳನ್ನು ಪುನಃ ಉತ್ಪನ್ನ ಮಾಡುವ ಕಾರ್ಯಕ್ರಮ ಅದಕ್ಕೆ ತಕ್ಕಷ್ಟಿಲ್ಲ. ಆದ್ದರಿಂದ ಅರಣ್ಯ ಶಾಖೆಯವರು ಈ ವಿಚಾರದಲ್ಲಿ ಇನ್ನೂ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಬರೀ ಹಣ ಖರ್ಚು ಮಾಡುವುದಲ್ಲ. ಹಣವನ್ನು ಸದ್ವಿನಿಯೋಗ ಮಾಡುವಂತೆ ಮಾಡಬೇಕು. ನಾನು ಸರ್ಕಾರದವರಿಗೆ ಹೇಳುವುದಿಷ್ಟೇ. ಬರೀ ಅರಣ್ಯಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಮಾತ್ರ ನಂಬಿ, ಅವರು ಹೇಳುವುದೆಲ್ಲಾ ಸರಿಯೆಂದು ನಂಬಬೇಡಿ. ಎಲ್ಲಿಯವರೆಗೆ ನಂಬಬಹುದೋ ಅಲ್ಲಿಯವರೆಗೆ ನಂಬಬೇಕು. ಅದರ ಮೇಲೆ, ತಾವೇ ವಿಶೇಷ ಸಿಬ್ಬಂದಿ ಇಟ್ಟುಕೊಂಡು ಅವರ ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ನಡೆಯುತ್ತಿವೆಯೆಂಬುದನ್ನು ತಿಳಿದುಕೊಳ್ಳಬೇಕು. ಹಾಗಿಲ್ಲದೆ ಅವರು ಹೇಳುವುದೆಲ್ಲಾ ಸತ್ಯಾಂಶವೆಂದು ತಿಳಿಯುವುದು . .

ಶ್ರೀ ಎ. ಭೀಮಪ್ಪನಾಯಕರು.—ಫಾರೆಸ್ಟ್ ಇಲಾಖೆಯವರಲ್ಲದೆ ಇನ್ಯಾವ ಸಿಬ್ಬಂದಿಯಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅದನ್ನು ಹೇಳಬೇಕಾಗಿಲ್ಲ. ಅರಣ್ಯ ಇಲಾಖೆಯವರು ಮಾಡತಕ್ಕ ಕಾರ್ಯಚಟುವಟಿಕೆಗಳು ಎಷ್ಟುಮಟ್ಟಿಗೆ ಸಮರ್ಪಕವಾಗಿ ನಡೆಯುತ್ತಿವೆಯೆಂಬುದನ್ನು ಯಾರಿಗೂ ಪತ್ತೆಯಿಲ್ಲದಂತೆ ತನಿಖೆ ನಡೆಸಿ ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ನಿಮಗೆ ಆ ಜನರು ಬಂದು ಕಾಡಿನಲ್ಲಿ ಇಷ್ಟು ಕಡೆಯಲ್ಲಿ ಕೆಲಸ ಮಾಡಿದ್ದೇವೆಂದು ಹೇಳಬಹುದು, ಒಂದು ವೇಳೆ ಮಂತ್ರಿಗಳನ್ನೇ ಕಾಡಿನೊಳಗೆ 2-3 ಮೈಲಿ ಕರೆದುಕೊಂಡು ಹೋಗಿ ತೋರಿಸಿದರೂ ತೋರಿಸಬಹುದು. ನೀವು ನಿಜಾಂಶವನ್ನು ಪತ್ತೆ ಮಾಡುವುದು ಕಷ್ಟ. ಏಕೆಂದರೆ, ಹಿಂದೆ ಎಂದೋ ಮಾಡಿದ್ದುದನ್ನು ಆಗಲೇ ಮಾಡಿದ್ದು ಎಂದು ಹೇಳಿದರೂ ನಿಮಗೆ ಅದು ಗೊತ್ತಾಗುವುದಿಲ್ಲ. ಆದ್ದರಿಂದ ಈ ಪ್ರಕಾರ ಸೂಚನೆ ಕೊಟ್ಟು ಅರಣ್ಯ ಸಂಪತ್ತನ್ನು ಆದಷ್ಟು ಅಭಿವೃದ್ಧಿ ಮಾಡುವುದಕ್ಕೆ ಸೂಕ್ತ ಏರ್ಪಾಡುಗಳನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಅರಣ್ಯ ಸಂಪತ್ತು ದೇಶಕ್ಕೆ ಬಹು ಮುಖ್ಯವಾದ ಸಂಪತ್ತೆಂದು ಹೇಳಿದರೆ ಅದು ತಪ್ಪಾಗಲಾರದು. ಈ ದೃಷ್ಟಿಯಿಂದ ನೋಡುವುದಾದರೆ ಈಗ ನಮ್ಮ ದೇಶಕ್ಕೆ ಎಷ್ಟು ಅರಣ್ಯ ಸಂಪತ್ತು ಇರಬೇಕಾಗಿತ್ತೋ ಅಷ್ಟುಸಂಪತ್ತು, ಅಷ್ಟುಅರಣ್ಯ ನಮ್ಮಲ್ಲಿಲ್ಲವೋ ಏನೋ ಎಂದು ಕೆಲವು ಸಂದರ್ಭಗಳಲ್ಲಿ ನಮಗನ್ನಿಸು

(ಶ್ರೀ ಟಿ. ಮಾದಯ್ಯಗೌಡರು.)

ತ್ತದೆ. ಏಕೆಂದರೆ ನಾನು ಕೆಲವು ಪ್ರವೀಣರನ್ನು ಈ ವಿಚಾರದಲ್ಲಿ ಪ್ರಶ್ನೆಮಾಡಿದಾಗ ಸುಮಾರು 20 ವರ್ಷಗಳ ಹಿಂದೆ ನಮಗೆ ಎಷ್ಟಿರಬೇಕಾಗಿತ್ತೋ ಅಷ್ಟು ಮಾತ್ರ ಈಗ ಇದೆಯೆಂದು ಹೇಳಿದರು. ಈಚೆಗೆ ಅನೇಕ ಕಾರಣಗಳಿಂದ ಅರಣ್ಯ ಸಂಪತ್ತು ಇನ್ನೂ ಕಡಿಮೆಯಾಗಿ ನಮ್ಮ ದೇಶಕ್ಕೆ ಅದು ಎಷ್ಟಿರಬೇಕೋ ಅಷ್ಟಿಲ್ಲವೆಂದು ಹೇಳಬಹುದಾಗಿದೆ. ಒಂದು ಮುಖ್ಯ ಕಾರಣವೆಂದರೆ, ಈಗ ಜಿಲ್ಲಾ ಮನ್ನಾ ಜಂಗಲಿಗಳೂ ಮತ್ತು ಸ್ಟೇಟ್ ಫಾರೆಸ್ಟ್‌ಗಳೂ ಬಹು ಭಾಗ ಈಚೀಚೆಗೆ ಕಡಿಮೆಯಾಗಿರುವುದೇ ಆಗಿದೆ. ಸಾಲದ್ದಕ್ಕೆ ಅನೇಕ ಕಡೆ ಕಾಡುಗಳು ನಾಮಾವಶೇಷವಾಗಿ ಅಳಿಸಿ ಹೋಗಿ ಯಾವ ವಿಧವಾದ ಹೊಸ ಮರಗಿಡಗಳನ್ನೂ ಬೆಳಸದಿರುವುದೂ ಒಂದು ಕಾರಣ.

ಈ ಕಾರಣಗಳಿಂದ ಅರಣ್ಯಸಂಪತ್ತು ನಮಗೆ ಎಷ್ಟಿತ್ತೋ, ಎಷ್ಟಿರಬೇಕಾಗಿತ್ತೋ ಅಷ್ಟು ಈ ದಿವಸ ಇಲ್ಲವೆಂದು ಭಾವಿಸುತ್ತೇನೆ. ಇರುವ ಅರಣ್ಯಸಂಪತ್ತು ಕೂಡ ಎಷ್ಟು ಉತ್ತೇಜಕವಾಗಿ ಯಾವ ರೀತಿಯಲ್ಲಿರಬೇಕಾಗಿತ್ತೋ ಆ ರೀತಿಯಲ್ಲಿವೆಯೋ, ಇಲ್ಲವೋ ಎಂದು ಸಂಶಯಪಡುತ್ತೇನೆ. ಏಕೆಂದರೆ, ನಾವು ಏನಾದರೊಂದು ಯೋಜನೆಯನ್ನು ಹಾಕಿಕೊಂಡು ಅರಣ್ಯಸಂಪತ್ತನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಿಲ್ಲ. ಇದನ್ನು ಉಪಯೋಗಿಸಿಕೊಳ್ಳುವ ಕೆಲಸ ಮಾತ್ರ ವ್ಯವಸ್ಥಿತವಾಗಿಯೋ ಅವ್ಯವಸ್ಥಿತವಾಗಿಯೋ ಹೆಚ್ಚಾಗಿ ನಡೆಯುತ್ತಿದೆ. ಅರಣ್ಯವನ್ನು ಬೆಳೆಸಿಕೊಳ್ಳುವ ರೀತಿ ಸರಿಯಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಇದು ತಪ್ಪಾಗಿದ್ದರೆ ನನಗೆ ಸಂತೋಷವೇ ಸರಿ. ಅನೇಕ ವರ್ಷಗಳಿಂದ ಅರಣ್ಯವನ್ನು ಬೆಳಸುವುದಕ್ಕೆ ಪ್ಲಾಂಟೇಷನ್‌ಗಳನ್ನು ಹಾಕುವುದಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಆದರೆ, ಅರಣ್ಯ ಇಲಾಖೆಯಲ್ಲಾಗಲೀ ಸರ್ಕಾರದಲ್ಲಾಗಲೀ ಕಳೆದ 50 ವರ್ಷಗಳಿಂದ ಈಚೆಗೆ ಯಾವ ಯಾವ ವರ್ಷ ಎಷ್ಟೆಷ್ಟು ಹಣ ಇದಕ್ಕಾಗಿ ಖರ್ಚಾಗಿದೆ, ದೇಶದ ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಪ್ಲಾಂಟೇಷನ್ ಹಾಕಿದರು, ಇದು ಸರಿಯಾಗಿ ಅಭಿವೃದ್ಧಿಯಾಗಿದೆಯೇ ಇಲ್ಲವೇ ಅಥವ ಯಾವ ಸ್ಥಿತಿಯಲ್ಲಿವೆ, ಎಷ್ಟು ಹಣ ಖರ್ಚಾಯಿತೋ ಅದಕ್ಕೆ ತಕ್ಕ ಪ್ರತಿಫಲ ಬಂದಿದೆಯೇ ಇಲ್ಲವೇ ಎಂಬ ಲೆಕ್ಕವನ್ನಿಟ್ಟಿದ್ದಾರೆಯೆ ಎಂದು ಕೇಳುತ್ತೇನೆ. ಈಚೆಗೆ ನಾವು ಇದೇ ರೀತಿಯ ಸಭೆಯಲ್ಲಿ ಎದುರು ಪಕ್ಷದಲ್ಲಿದ್ದಾಗ ಈ ಪ್ರಶ್ನೆಯನ್ನು ಕೇಳುತ್ತಿದ್ದೆವು. ಯಾವ ಯಾವ ಪ್ರದೇಶದಲ್ಲಿ ಪ್ಲಾಂಟೇಷನ್ ಹಾಕಿದ್ದು ಎಷ್ಟೆಷ್ಟು ಮಟ್ಟಿಗಿದೆ ಎಂಬುದನ್ನು ನಕ್ಷೆಯ ರೂಪದಲ್ಲಿ ತಯಾರು ಮಾಡಿದ್ದೀರಾ ಎಂದು ಸರ್ಕಾರದವರನ್ನು ಕೇಳುತ್ತಿದ್ದೆವು. ಈ ಹೊತ್ತು ಯಾವ ಯಾವ ಪ್ರಾಂತ್ಯದಲ್ಲಿ ಯಾವ ಯಾವ ವರ್ಷ ಎಷ್ಟೆಷ್ಟು ವಿಸ್ತೀರ್ಣದಲ್ಲಿ ಪ್ಲಾಂಟೇಷನ್ ಹಾಕಿದ್ದಾರೆ, ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರೆಂಬುದು ನಿಗದಿಯಾದ ಲೆಕ್ಕ ಸಿಕ್ಕುತ್ತದೆಯೆ ? ಅದನ್ನು ತನಿಖೆ ಮಾಡಿ ಅದು ನಿಜವೇ ಸುಳ್ಳೇ ಎಂಬುದನ್ನು ನೋಡಿಕೊಳ್ಳುತ್ತಿದ್ದಾರೆಯೆ ? ಖರ್ಚು ಮಾಡಿದ ಹಣ ಫಲಕಾರಿಯಾಗಿದೆಯೇ ಎಂಬುದನ್ನು ತಿಳಿದುಕೊಳ್ಳಬೇಕು. ಹೀಗೆ ಮಾಡದೆ ಹೋದರೆ, ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾಗ್ಯೂ ನಮ್ಮ ಅರಣ್ಯ ಸಂಪತ್ತು ಎಷ್ಟು ಉತ್ಕೃಷ್ಟ ರೀತಿಯಲ್ಲಿರಬೇಕೋ ಅಷ್ಟುಮಟ್ಟಿಗೆ ಇರುವುದಿಲ್ಲ. ಅರಣ್ಯಗಳನ್ನು ಒಳ್ಳೆಯ ಸ್ಥಿತಿಯಲ್ಲಿ ಬೆಳೆಸಲು ಪ್ರಯತ್ನ ಮಾಡಬೇಕು. ಈ ಹೊತ್ತು ನಮಗೆ ಇಷ್ಟೊಂದು ಅರಣ್ಯಗಳಿದ್ದೂ ನಮ್ಮ ಸ್ಥಿತಿ ಹೇಗಿದೆಯೆಂಬುದನ್ನು ನೋಡಿ. ನಮಗೆ ಬೇಕಾದ ಸಾಗವಾನಿ ಮತ್ತು ಅರಣ್ಯ ಕೈಗಾರಿಕೆ ವಸ್ತುಗಳನ್ನು ಕೋಟ್ಯಾಂತರ ರೂಪಾಯಿ ಕೊಟ್ಟು ಹೊರದೇಶಗಳಿಂದ ತರಿಸುತ್ತಿದ್ದೇವೆ. ರಂಗೂನಿನಿಂದ ಬಹುಮಟ್ಟಿಗೆ ನಮಗೆ ಸಾಗವಾನಿ ಈಗಲೂ ಬರುತ್ತಿದೆ. ಪಶ್ಚಿಮ ತೀರಪ್ರದೇಶಗಳಿಂದ ನಮಗೆ ಬೇಕಾದ ಮರಗಳು ಬರುತ್ತಿವೆ ಎಂದರೆ ನಾವು ತಲೆ ತಗ್ಗಿಸತಕ್ಕ ಮಾತು ಎನ್ನಿಸುತ್ತದೆ. ಅನೇಕ ಉಪಯುಕ್ತವಾದ ಮರಗಳನ್ನು ಬೆಳೆಸುವ ವಿಧಾನವನ್ನು ನಮ್ಮ ಸ್ನೇಹಿತರು ಪ್ರಸ್ತಾಪ ಮಾಡಿದರು. ಸಿಂಕೋನ ಮರವನ್ನು ಸ್ವಲ್ಪಮಟ್ಟಿಗೆ ಇಲ್ಲಿ ಬೆಳೆಯುತ್ತಿದ್ದಾರೆ. ಬಾಬಾಬುಡನ್ ಬೆಟ್ಟದಲ್ಲಿ ಸಿಂಕೋನವನ್ನು ತಯಾರು ಮಾಡಿ ನಮ್ಮ ದೇಶಕ್ಕೆ ಬೇಕಾದ ಸಿಂಕೋನವನ್ನು ನಾವೇ ತಯಾರು ಮಾಡಿಕೊಳ್ಳಬಹುದೆಂದು ಗೊತ್ತಾಗಿದೆ. ಹಾಗೆಯೇ ಪೈರೆತ್ರಂ ಕೂಡ ಬಹಳ ಉಪಯುಕ್ತವಾದ ವಸ್ತು. ರಬ್ಬರ್ ಗಿಡಗಳನ್ನು ಕೊಡಗಿನಲ್ಲಿ ಬೆಳೆಯಬಹುದು. ಉತ್ತಮವಾದ ರಬ್ಬರನ್ನು ಅಲ್ಲಿ ತಯಾರು ಮಾಡುತ್ತಿದ್ದಾರೆ. ಇನ್ನೂ ಅನೇಕ ಭಾಗಗಳಲ್ಲಿ ರಬ್ಬರು ಗಿಡಗಳನ್ನು ಬೆಳೆದು ರಬ್ಬರ್ ತಯಾರಿಸುತ್ತಿದ್ದಾರೆ. ಈ ಕಾಲದಲ್ಲಿ ರಬ್ಬರ್ ಬಹಳ ಉಪಯುಕ್ತವಾದ ವಸ್ತು. ಇದನ್ನು ಚೆನ್ನಾಗಿ ಬೆಳೆಸಿ ನಮ್ಮ ದೇಶಕ್ಕೆ ಬೇಕಾದಷ್ಟನ್ನು ಉತ್ಪತ್ತಿ ಮಾಡದಿದ್ದರೆ ನಮ್ಮ ಕರ್ತವ್ಯ ಲೋಪವಾಗುತ್ತದೆ.

ಶ್ರೀ ಎಚ್. ಟಿ. ಗುಂಡಪ್ಪಗೌಡರು.—It is a failure. ನಮ್ಮ ದೇಶದಲ್ಲಿ ರಬ್ಬರ್ ಸರಿಯಾಗಿ ಬೆಳೆಯುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಹಾಗೆಯೇ ಔಷಧಕ್ಕೆ ಬೇಕಾದ ಗಿಡ ಮೂಲಿಕೆಗಳನ್ನು ಯಥೇಚ್ಛವಾಗಿ ನಮ್ಮ ಅರಣ್ಯದಲ್ಲಿ ಬೆಳೆಯಬಹುದು. ಬಾಬಾಬುಡನ್ ಬೆಟ್ಟದಲ್ಲಿ ಬೆಳೆಯುತಕ್ಕ ಗಿಡಮೂಲಿಕೆಗಳು ಬಹಳ ಅಮೂಲ್ಯವಾದವೆಂದು ಭರತಖಂಡದಲ್ಲೇ ಪ್ರಖ್ಯಾತಿಯಾಗಿದೆ. ಅಲ್ಲಿ ವಾಸವಾಗಿರುವ ಜನರು ಮೂಲಿಕೆಗಳನ್ನು ತಂದು ಹಳ್ಳಿಗಳಲ್ಲಿ ಮಾರುವುದು ಅನೇಕರಿಗೆ ಗೊತ್ತಿದೆ. ಸುಪ್ರಸಿದ್ಧವಾದ ಮೂಲಿಕೆಗಳನ್ನು ಬೆಳೆಯತಕ್ಕ ಅನುಕೂಲ ನಮ್ಮ ದೇಶದಲ್ಲಿದೆ. ಇದಕ್ಕೆ ಸರಿಯಾದ ಪಂಡಿತರನ್ನು ನೇಮಕಮಾಡಿಕೊಂಡು ಗಿಡಮೂಲಿಕೆಗಳನ್ನು ಬೆಳೆದುಕೊಂಡು, ಹಿಂದೆ ಸರ್ಕಾರದವರು ಅಭಿಪ್ರಾಯಪಟ್ಟಂತೆ ಒಳ್ಳೆಯ ಔಷಧಗಳನ್ನು ನಮ್ಮಲ್ಲಿಯೇ ತಯಾರುಮಾಡಿ ಅವುಗಳನ್ನು ನಮ್ಮ ದೇಶದಲ್ಲಿ ಉಪಯೋಗ ಮಾಡುವುದಲ್ಲದೆ ಹೊರದೇಶಗಳಿಗೆ ಮಾರಾಟ ಮಾಡಿದರೆ ಒಳ್ಳೆಯ ಲಾಭ ಪಡೆಯಬಹುದೆಂದು ತೋರುತ್ತದೆ. ಹೀಗೆ ಬೇಕಾದಷ್ಟು ಅರಣ್ಯ ಸಂಪತ್ತನ್ನು ಹೆಚ್ಚಿಸುವ ಅವಕಾಶವಿದೆ. ಹೀಗಿದ್ದರೂ ಈಗ ನಮ್ಮ ರೈತರಿಗೆ ಬೇಕಾದ ನೇಗಿಲು ಗಾಡಿಗಳಿಗೆ ಬೇಕಾದ ಮರದ ಸಾಮಾನುಗಳೂ ಸರಿಯಾಗಿ ಸಿಕ್ಕುತ್ತಿಲ್ಲ, ಪರದೇಶದಿಂದ ತರಿಸುತ್ತಿದ್ದೇವೆ. ಇಂತಹ ಶೋಚನೀಯವಾದ ಸ್ಥಿತಿಗೆ ಅವಕಾಶವಿರಬಾರದು. ಹೆಚ್ಚು ಅರಣ್ಯಸಂಪತ್ತು ಅಭಿವೃದ್ಧಿಯಾಗಬೇಕೆಂದು ಅಪೇಕ್ಷಿಸುತ್ತೇನೆ.

ಶ್ರೀ ಜಿ. ಎ. ಆಚಾರ್ಯರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನಮ್ಮ ಸಂಸ್ಥಾನದ ಅರಣ್ಯ ಸಂಪತ್ತನ್ನು ಎಷ್ಟು ಹೆಚ್ಚಿಸಬಹುದೋ ಅಷ್ಟು ಹೆಚ್ಚಿಸಿಲ್ಲವೆಂದು ನನ್ನ ಅರಿಕೆ. ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಇಂಡಿಯನ್ ಸೈನ್ಸ್ ಕಾಂಗ್ರೆಸ್ ಕಾರ್ಯಕಲಾಪಗಳು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಭವನದಲ್ಲಿ ನಡೆದವು. ಅದಕ್ಕೆ ಅನೇಕ ದೇಶಗಳಿಂದ ಪ್ರಖ್ಯಾತ ವಿಜ್ಞಾನಿಗಳು ಬಂದಿದ್ದರು. ಅವರಲ್ಲಿ ಜರ್ಮನ್ ದೇಶದ ವಿಜ್ಞಾನಿಯೊಬ್ಬರು ವೈರ್ಗಾರ್ಟ್‌ನರ್ ಎಂಬವರೊಡನೆ ನಾನು

ಮಾತನಾಡುತ್ತಿದ್ದಾಗ ಅವರು "ಆಚಾರ್ಯ! ನಾನು ಎಷ್ಟೋ ಅರಣ್ಯಗಳನ್ನು ನೋಡಿದ್ದೇನೆ, ಎಷ್ಟೋ ದೇಶಗಳನ್ನು ಸುತ್ತಿದ್ದೇನೆ, ನಿಮ್ಮ ದೇಶದಲ್ಲಿ ವಿಮಾನದಲ್ಲಿ ಹೋಗುತ್ತಿದ್ದರೆ ಅರಣ್ಯಗಳ ಮಧ್ಯೆ ಅಲ್ಲಲ್ಲಿ ಖಾಲಿ ಜಮೀನು ಕಾಣಿಸುತ್ತದೆ. ಇದೇನು ನಿಮ್ಮ ಅರಣ್ಯಗಳನ್ನು ಯಾವುದೋ ಒಂದು ಉಪಯುಕ್ತವಾಗಿ ಬೇಕಾಗಿರುವ ಸಾಮಾನು ತೆಗೆಯಲು ಕಡಿಸುತ್ತಾರೆಂದು ಕಾಣುತ್ತದೆ. ಆದರೆ ಕಡಿಯುವುದರಿಂದ ಆಗತಕ್ಕ ತೊಂದರೆ ನಿಮಗೆ ಗೊತ್ತಿದೆಯೆ? ನಮ್ಮ ದೇಶದಲ್ಲಿ ಅನೇಕ ಸಂಸಾರಗಳು ವಾರಕ್ಕೊಮ್ಮೆ ಸೇರಿ ಅರಣ್ಯಕ್ಕೆ ಹೋಗಿ ನೋಡುವುದೂ ಅಲ್ಲದೆ ಅಲ್ಲಿಯ ವಿಚಾರಗಳನ್ನು ತಿಳಿದುಕೊಂಡು ಬಂದು ಸರ್ಕಾರಕ್ಕೆ ತಿಳಿಸಿ ಇಂತಿಂಥಾ ಕಡೆ ಹೀಗಾಗಿದೆ ಎಂಬುದನ್ನು ಹೇಳುತ್ತಾರೆ" ಎಂದು ಅವರು ಹೇಳಿದರು. ಎಂದಿನವರೆಗೆ ನಮ್ಮ ದೇಶ ಪ್ರತಿಯೊಂದು ಅರಣ್ಯವನ್ನು ಚೆನ್ನಾಗಿ ಕಾಪಾಡುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಏಳಿಗೆಯಾಗುವುದಿಲ್ಲವೆಂದು ಹೇಳುತ್ತೇನೆ ಇನ್ನು ಮೂವತ್ತು ವರ್ಷ ಹಾಗೆಯೇ ಇದ್ದರೆ ಅದರ ಫಲವನ್ನನುಭವಿಸುತ್ತೀರಿ ಎಂದು ಅವರು ಹೇಳಿದರು. ನಮ್ಮ ಸಂಸ್ಥಾನ ನದಿ, ಗುಡ್ಡ, ಬೆಟ್ಟ, ಅರಣ್ಯಗಳಿಗೆ ಖ್ಯಾತಿ ಪಡೆದಿದೆ. ಕೈಗಾರಿಕೆಗಳಲ್ಲಿಯೇ ಲಾಭಬರುತ್ತದೆ, ಬೇರೆ ಬಾಬುಗಳಿಂದ ಲಾಭ ಬರುತ್ತಿಲ್ಲವೆಂದು ನಮ್ಮ ಸರ್ಕಾರ ತಿಳಿದುಕೊಂಡಿರಬಹುದು. ಆದರೆ ಅರಣ್ಯಗಳಿಂದ ಏನು ಪ್ರಯೋಜನವಿತ್ತು, ಈಗ ಏನಾಗಿದೆ ಎಂಬುದು ನಮ್ಮ ಅರಣ್ಯ ಇಲಾಖೆಯವರಿಗೆ ಇನ್ನೂ ಮುಂದಟ್ಟಾಗಿಲ್ಲವೆಂದು ನನ್ನ ಭಾವನೆ.

ನಮ್ಮ ದೇಶದಲ್ಲಿ ನ್ಯೂಸ್ ಪ್ರಿಂಟಿಗೆ ಎಷ್ಟು ಕಷ್ಟಪಡುತ್ತಿದ್ದೇವೆಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಕ್ಯಾನಡಾ ದೇಶದಲ್ಲಿ ಅರಣ್ಯಗಳನ್ನು ಬೆಳೆಸುವ ಸಂಸಾರಗಳೆಂದೇ ಎಷ್ಟೋ ಸಂಸಾರಗಳಿವೆ. ಕಾಗದಕ್ಕೆ ಬೇಕಾದ ಪಲ್ಪ್ ಸಿಕ್ಕುವ ಮರಗಳನ್ನು ಬೆಳೆಸುವುದು ಅವರ ಕರ್ತವ್ಯ. ಅಂಥಾದ್ದು ಒಂದು ಜಾತಿ ಮರ ಇದೆ. ಸರ್ಕಾರದವರೂ ಕೂಡ ಇದು ತಮ್ಮ ಕರ್ತವ್ಯವೆಂದು ಭಾವಿಸಿ ಮಾಡಬೇಕು. ಅರಣ್ಯದಲ್ಲಿ ಎಷ್ಟೋ ಜಾತಿಯ ಗಿಡಮರಗಳು ಕಣ್ಣಿಗೆ ಕಾಣದೇಯಿರಬಹುದು ಅಥವ ತಿಳಿದುಕೊಳ್ಳಲು ನಮಗೆ ಸಾಕಾದಷ್ಟು ಜ್ಞಾನವಿಲ್ಲದೇಯಿರಬಹುದು, ಆದರೆ ಸರ್ಕಾರದವರು ಅರಣ್ಯದಲ್ಲಿ ಏನಿದೆ ಎಂಬುದನ್ನು ವಿಜ್ಞಾನದ ಸಹಾಯದಿಂದ ತಿಳಿಯಬೇಕು. ಇಲ್ಲದಿದ್ದರೆ ಅಲ್ಲಿ ಚಿನ್ನವಿದ್ದರೂ ಕಾಣುವುದಿಲ್ಲ. ಭೂಮಿಯಲ್ಲಿ ಏನೇನು ಅಡಗಿದೆ ಎನ್ನುವುದನ್ನು ಕೂಡ ವಿಜ್ಞಾನಶಾಸ್ತ್ರ ಸಹಾಯದಿಂದ ತಿಳಿಯಬಹುದು. 20 ಅಡಿ, 100 ಅಡಿ ಒಳಗೆ ಏನಿದೆಯೆಂಬುದು ಕೂಡ ಗೊತ್ತಾಗುತ್ತದೆ.

ನಮ್ಮ ಮೈಸೂರು ಸಂಸ್ಥಾನಲ್ಲಿ ಈಗ ಹಾಲೀ ನಡೆದಿರತಕ್ಕದ್ದು, ನನಗೆ ತಿಳಿದುಬಂದಿರುವಮಟ್ಟಿಗೆ, ಮತ್ತು ನನ್ನ ಅನುಭವಕ್ಕೆ ಬಂದಿರುವಷ್ಟನ್ನು ತಿಳಿಸಿದ್ದೇನೆ. ಹಾಗೆ ಈ ದಿವಸದ ನಮ್ಮ ಅನುಭವವೆಲ್ಲ ನಮಗೆ ಆ ಕಾಡಿನಿಂದ ಏನೇನು ಬೇಕೋ ಅವುಗಳೆಲ್ಲ, ಅಂಥಾ ಪದಾರ್ಥಗಳೆಲ್ಲ ಅಡವಿಯಲ್ಲಿ ಈ ದಿವಸ ಇವೆಯೋ ಅಥವಾ ಇಲ್ಲವೇ ಎಂಬುದನ್ನು ಇವರು ವಿಚಾರಮಾಡಲಿಲ್ಲವೆಂದು ನಾನು ಹೇಳುತ್ತೇನೆ. ಅಲ್ಲಲ್ಲೆ ಇದ್ದಂಥ ಅಲ್ಪಸ್ವಲ್ಪ ಕಾಡುಗಳೂ ಕೂಡ ಈ ದಿವಸ ಹೊರಟುಹೋಗಿ, ದೇಶಕ್ಕೆ ಅತ್ಯಗತ್ಯವಾದ ಆ ವನಸಂಪತ್ತಿಲ್ಲದೆ, ಅದರ ಪ್ರತಿಫಲವನ್ನು ನಾವೀದಿವಸ ಅನುಭವಿಸುತ್ತಿದ್ದೇವೆ. ಅಷ್ಟೆಲ್ಲವೂ ಇರಲಿ, ಇಂದು ಬೆಂಗಳೂರಿನ ಹವ ಎಷ್ಟು ಬಿಸಿಯಾಗಿದೆ! ನಾವು ಇಲ್ಲಿ ಇಷ್ಟೆಲ್ಲಾ ಫ್ಯಾನುಗಳನ್ನು ಹಾಕಿಕೊಂಡಿದ್ದಾಗ್ಯೂ ಹೀಗೆ ಶಕೆಯಾಗುತ್ತಿರುವುದಕ್ಕೆ ಕಾರಣವೇನೆಂಬುದನ್ನು ಆಲೋಚಿಸಿ ನೋಡುವುದಾದರೆ ಇಂದು ಆ ವನಸಂಪತ್ತು ಇಲ್ಲದಿರುವುದೇ ಮುಖ್ಯವಾದ ಕಾರಣ. ಇಂಥಾ ಸನ್ನಿವೇಶದಲ್ಲಿ ಇದನ್ನು ಅಭಿವೃದ್ಧಿಗೆ ತರುವುದರ ಬಗ್ಗೆ ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯ ಮತ್ತು ಅರಣ್ಯ ಇಲಾಖೆಯಲ್ಲಿರತಕ್ಕ ಎಲ್ಲಾ ನೌಕರರ ಮತ್ತು ಸರ್ಕಾರದವರ ಗಮನವನ್ನು ಸೆಳೆಯತಕ್ಕದ್ದು ತುಂಬಾ ಆವಶ್ಯಕವಾಗಿರುತ್ತೆ. ಆ ಕಾರಣದಿಂದ ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

Sri M. N. JOIS.—Sir, I move:

"That the question be now put."

Mr. SPEAKER.—The question is:

"That the question be now put."

The motion was adopted.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಂಸ್ಥೆಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಈ ಖೋತಾ ನಿರ್ಣಯದ ಮೇಲೆ ಮಾಡಿರತಕ್ಕ ರಚನಾತ್ಮಕ ಟೀಕೆಗಳನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತಾ ಈ ಅರಣ್ಯಸಂಪತ್ತಿನ ಅಭಿವೃದ್ಧಿ ವಿಚಾರದಲ್ಲಿ, ಎಲ್ಲ ಮಾನ್ಯ ಸದಸ್ಯರಿಗೂ ಎಷ್ಟು ಆಸಕ್ತಿ ಇದೆಯೋ, ಸರ್ಕಾರದವರಿಗೂ ಅಷ್ಟೆ ಆಸಕ್ತಿ ಇದೆಯೆಂಬುದನ್ನು ತಮಗೆ ಹೇಳಬಯಸುತ್ತೇನೆ. ಯಾವ ದೇಶದಲ್ಲಿಯೇ ಅಗಲೀ ಅರಣ್ಯ ಸಂಪತ್ತಿದ್ದರೇ ನಾನಾ ವಿಧದಲ್ಲಿ ಅನುಕೂಲಗಳು ದೊರಕುತ್ತವೆಂದೂ ಮತ್ತು ಅಂಥಾ ಪ್ರದೇಶದಲ್ಲಿ ಮಳೆಬೆಳೆಗಳೂ ಕೂಡ ಸಂವೃದ್ಧಿಯಾಗಿ ಆಗುತ್ತವೆಂದು, ಅನುಭವದಿಂದ ಅನೇಕರು ಹೇಳಿರತಕ್ಕದ್ದನ್ನ ಕೇಳಿರುತ್ತೇನೆ. ನಮ್ಮ ದೇಶದಲ್ಲಿರತಕ್ಕ ಅರಣ್ಯ ಸಂಪತ್ತು ಇಡೀ ದೇಶಕ್ಕೆ ಎಷ್ಟಿರಬೇಕೋ ಅಷ್ಟಿಲ್ಲ. ಇದು ದೇಶದ ವಿಸ್ತೀರ್ಣದಲ್ಲಿ ಶೇಕಡ 25ರಷ್ಟಿರಬೇಕು. ಆದರೆ ಈಗ ಇರತಕ್ಕದ್ದು ಕೇವಲ 14 ಪರ್ಸೆಂಟ್. ಅಂದರೆ ಎಷ್ಟಿರಬೇಕೋ ಅಷ್ಟು ಇಲ್ಲದೆ ಅಳತೆಗೆ ಕಮ್ಮಿಯಾಗಿದೆ. ಆದರೆ ಈಗ ಇರತಕ್ಕ ಅರಣ್ಯವನ್ನು ಅಭಿವೃದ್ಧಿಪಡಿಸುವುದರಲ್ಲಿ ಯಾವ ಅನುಮಾನವೂ ಇಲ್ಲ. ನಮ್ಮ ದೇಶದಲ್ಲಿರತಕ್ಕ ಅರಣ್ಯಗಳಿಂದ ಈ ದಿವಸ ಎಷ್ಟರಮಟ್ಟಿಗೆ ಸೌದೆ, ಮತ್ತು ಇತರ ಮರಮುಟ್ಟುಗಳು ಯಾವ ರೀತಿಯಲ್ಲಿ ಖರ್ಚಾಗುತ್ತಿವೆಯೆಂಬುದನ್ನು ಸ್ವಲ್ಪ ಆಲೋಚನೆ ಮಾಡಿ ನೋಡಬೇಕಾಗಿದೆ. ಹೋದವರ್ಷ ಸೌದೆ ಮತ್ತು ಇದ್ದಲಿನ ಅಭಾವಕ್ಕಾಗಿ ಕಾಡನ್ನು ಕಡಿಯಬೇಕಾಗಿ ಬಂತು. ಆದರೆ ಈ ಬಗ್ಗೆ ನಾನು ಒಂದು ಪಟ್ಟಿಯನ್ನೇ ತಯಾರು ಮಾಡಿಕೊಂಡಿದ್ದೇನೆ. ಆದರೆ ಅದನ್ನು ನಾನು ಇಲ್ಲಿ ಈಗ ತಂದಿರುವುದಿಲ್ಲ. ಬೆಂಗಳೂರು ಸಿಟಿ ಮತ್ತು ಸಿವಿಲ್ ಏರಿಯಾ, ಮೈಸೂರು, ಕೋಲಾರ, ತುಮಕೂರು, ಇತ್ಯಾದಿ ಸ್ಥಳಗಳಿಗೆ ಎಷ್ಟು ಪ್ರದೇಶದಲ್ಲಿ ಕಾಡುಗಳನ್ನು ಸೌದೆ ಸರಬರಾಯಿಗಾಗಿ ಕತ್ತರಿಸಲಾಗಿರುತ್ತೆಂಬುದನ್ನು ತಿಳಿಸಬೇಕಾಗಿದೆ. ಮೈಸೂರು ಸಿಟಿಗೆ 7,137 ಟನ್‌ಗಳನ್ನು ಬೆಂಗಳೂರು ಮತ್ತು ಸಿವಿಲ್ ಏರಿಯಾಕ್ಕೆ 13,300 ಟನ್‌ಗಳನ್ನು ಒಂದು ವರ್ಷಕ್ಕೆ ಒದಗಿಸಲಾಗಿದೆ. ಈ ಬೆಂಗಳೂರು ಒಂದಕ್ಕೇ ಸೌದೆ ಸರಬರಾಯಿಗಾಗಿ ಎಷ್ಟೋ ಮರಗಳನ್ನು ಕಡಿಯಲಾಗಿದೆ. ಆದರೆ ಹೀಗೆ ಎಲ್ಲೆಲ್ಲಿ ಕಾಡು ದಟ್ಟವಾಗಿ ಬೆಳೆದಿತ್ತೋ ಅಂಥಾ ಕಡೆಗಳಲ್ಲಿ ಮಾತ್ರ ಮರಗಳನ್ನು ಕತ್ತರಿಸಿದ್ದಾಗ್ಯೂ ಪುನಃ ಮರಗಳು ಅಲ್ಲೆಲ್ಲಾ ಚಿಗುರಿರುತ್ತವೆ. ಹೀಗೆ

(ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.)

ಮಲೆನಾಡಿನಲ್ಲಿ ಕೆಲವು ಕಡೆ ಆಗಿದೆ. ಆದರೆ ಅದು ಏನೇ ಇರಲಿ. ಹೀಗೆ ಇದ್ದಂಥ ದೊಡ್ಡ ದೊಡ್ಡ ಕಾಡುಗಳೆಲ್ಲ ಕಡಿಮೆಯಾಗುತ್ತಾ ಸೌದೆಗೆ ಅಭಾವ ಜಾಸ್ತಿ ಆಗುತ್ತಿದೆ. ಕೆ. ಜಿ. ಎಫ್.ಗೆ ವರ್ಷ ಒಂದಕ್ಕೆ 4,666 ಟನ್ ಸೌದೆ ಸರಬರಾಯಿ ಆಗಿರುತ್ತೆ. ಭದ್ರಾವತಿಯ ಕಾರ್ಖಾನೆಗಾಗಿ, ಸುಡತಕ್ಕ ಇದ್ದಲಿನ ಬಗ್ಗೆ 1 ಲಕ್ಷ 20 ಸಾವಿರ ಟನ್ ಸೌದೆ ಬೇಕಾಗುತ್ತದೆ. ಹೀಗೆ ಅನೇಕ ವಿಚಾರಗಳಲ್ಲಿ ಹೆಚ್ಚಿನಮಟ್ಟಿಗೂ ಇದ್ದಲು ಮತ್ತು ಸೌದೆಗಳ ಬಗ್ಗೆ ಮರಗಳನ್ನು ಖರ್ಚುಮಾಡಬೇಕಾಗಿ ಬಂದಿದೆ.

ಆದರೆ ಈ ಬಗ್ಗೆ ಅರಣ್ಯಸಂಪತ್ತನ್ನು ಹೆಚ್ಚಿಸುವ ಕೆಲಸ ಕಾರ್ಯಗಳಲ್ಲಿ ಅರಣ್ಯ ಶಾಖಾ ಬಾಬಿನವರು ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಂಡಿದ್ದಾರೆ. ಆ ಬಗ್ಗೆ ಯಾರೂ ಅನುಮಾನಪಡಬೇಕಾಗಿಲ್ಲ. ಮಲೆನಾಡಿನಲ್ಲಿ ಈ ಅರಣ್ಯ ಸಂಪತ್ತನ್ನು ಹೆಚ್ಚಿಸತಕ್ಕ ಬಗ್ಗೆ ಅಷ್ಟೇನೂ ಹೆಚ್ಚು ಶ್ರಮಪಡಬೇಕಾಗಿಲ್ಲ. ಕೇವಲ ಪ್ರಕೃತಿ ಸೌಂದರ್ಯಗಳ ಮತ್ತು ಪ್ರಕೃತಿ ಸಂಪತ್ತುಗಳಿಂದ ಅನುಕೂಲತೆಗಳು ಅಲ್ಲಿ ಹೆಚ್ಚಾಗಿರುವುದರಿಂದ ಮನುಷ್ಯ ಪ್ರಯತ್ನಕ್ಕಿಂತಲೂ ಹೆಚ್ಚಾಗಿ ದೈವೀಕವಾಗಿಯೇ ಅಲ್ಲಿ ಬೆಳೆಯುತ್ತಿವೆ. ಇನ್ನೇನಿದ್ದರೂ ಈ ಕಾಡುಗಳನ್ನು ಅಭಿವೃದ್ಧಿಪಡಿಸತಕ್ಕ ಬಗ್ಗೆ ಮೈದಾನ ಪ್ರಾಂತ್ಯಗಳಲ್ಲಿ ನಾವು ಹೆಚ್ಚಿನ ಶ್ರಮಪಡಬೇಕಾಗಿದೆ. ಸಾವಿರಾರು ಎಕರೆಗಳಲ್ಲಿ ಸಸಿಗಳನ್ನು ನೆಡಲಾಗಿದೆ. ಅಷ್ಟೇ ಅಲ್ಲದೆ ಒಂದೇ ಕಡೆ ಸುಮಾರು ಹತ್ತು ಸಾವಿರ ಎಕರೆ ಭೂಮಿಯಲ್ಲಿ ಈ ಸಸಿಗಳನ್ನು ಹಾಕುವ ಕಾರ್ಯವನ್ನು ಕೈಕೊಂಡು ಅಲ್ಲಿ ಮರಗಳನ್ನು ಬೆಳೆಸಲಾಗುತ್ತಿದೆ. ಆದರೆ ಭೂಗುಣ ಮತ್ತು ನೀರಿನ ಅನುಕೂಲತೆಯಿಲ್ಲದೆ ಇದ್ದಾಗ್ಯೂ ಕೆಲವುಕಡೆ ಗಿಡಗಳು ಚೆನ್ನಾಗಿ ಬಂದಿವೆ. ಇನ್ನು ಕೆಲವು ಕಡೆ ಅಷ್ಟು ಚೆನ್ನಾಗಿ ಬಂದಿಲ್ಲ. ಅಂತೂ ಹೀಗೆ ಅನೇಕ ಕಡೆಗಳಲ್ಲಿ ಹೊಸ ಹೊಸದಾಗಿ ಪ್ಲಾನ್ಟೇಷನ್‌ಗಳನ್ನು ಮಾಡಲಾಗುತ್ತಿದೆ.

ಆದರೆ ಈ ಕಳ್ಳತನವಲ್ಲಿ ನಾಟಾ ಹೋಗುತ್ತಿದ್ದದ್ದು ಈಚೆಗೆ ಬಹಳ ಕಮ್ಮಿಯಾಗಿದೆ. ಹೋದವರ್ಷ ಈ Timber transit rules ಗಳು ಹೊಸದಾಗಿ ಜಾರಿಗೆ ಬಂದನಂತರ ಆ ಬಗ್ಗೆ ಒಂದು ವಿಶೇಷ ಸಿಬ್ಬಂದಿಯನ್ನೇ ನೇಮಕಮಾಡಿದ್ದು, ಅವರು ಇಂಥಾ ಎಷ್ಟೋ ಕಳ್ಳತನದಲ್ಲಿ ನಾಟಾ ಸಾಗಿಸುತ್ತಿದ್ದಂಥ ಕೇಸುಗಳನ್ನು ಪತ್ತೆಮಾಡಿದ್ದಾರೆ. ಲಕ್ಷಾಂತರ ರೂಪಾಯಿಗಳ ನಾಟವನ್ನು ಕತ್ತರಿಸಿ ಪೊದೆಗಳಲ್ಲಿ ಹಾಕಿದಂಥಾದ್ದನ್ನೂ ಸಹ ಪತ್ತೆ ಹಚ್ಚಿದ್ದಾರೆ ಹೀಗೆ ಒಂದು checking staff ಇಟ್ಟಿದ್ದರಿಂದ ಸರ್ಕಾರಕ್ಕೆ ಎಷ್ಟೋ ಉಳಿತಾಯವಾಗಿದೆ. ಆದರೆ ಈ ಶಿಬ್ಬಂದಿಯ ಬಗ್ಗೆ ಖರ್ಚಾಗುತ್ತಿರುವುದು ತೀರಾ ಸ್ವಲ್ಪ.

ಇನ್ನು ಹೊಸ ಹೊಸ ಪ್ಲಾನ್ಟೇಷನ್‌ಗಳನ್ನು ಏರ್ಪಡಿಸತಕ್ಕ ಬಗ್ಗೆ ಈ ಬಾಬಿಗೇ ಪ್ರತ್ಯೇಕವಾಗಿ ಒಬ್ಬ ಸಬ್-ಅಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಫಾರೆಸ್ಟ್ರವರನ್ನು ನೇಮಕಮಾಡಲಾಗಿದೆ. ಇವರು ಈಗಾಗಲೆ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಂಡಿರುತ್ತಾರೆ.

ಇನ್ನು ಈ ಫಾರೆಸ್ಟ್ ಇಲಾಖೆಗೆ ಸೇರಿದ್ದಂಥ ಕೆಲಕೆಲವು ಜಮೀನುಗಳನ್ನು ಫಾರೆಸ್ಟ್ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವರ್ಗಾಯಿಸಿ, ಅದನ್ನು ವ್ಯವಸಾಯಕ್ಕೋಸ್ಕರವಾಗಿ ಕೊಡಲೇಬೇಕಾಗಿ ಬಂದಿದೆ. ಹೀಗೆ ಕೊಡಲೇಬೇಕೆಂಬ ಒತ್ತಾಯ ಕೆಲವು ಕಡೆಗಳಿಂದ ಬಂದು ಹಾಗೆ ಕೆಲವು ಜಮೀನುಗಳನ್ನು ಕೊಡಲಾಗಿದೆ. ಆದರೆ ಹಾಗೆ ವಿಲೇವಾರಿಯಾಗಿರತಕ್ಕ ಭೂಮಿಯಾದರೋ ನಮ್ಮ ಕಾಡನ್ನು ಅಭಿವೃದ್ಧಿಪಡಿಸಲು ಅನುಕೂಲವಾಗಿಲ್ಲದೆ ಇದ್ದು, ನೀರಿನ ಸೌಕರ್ಯ ಇತ್ಯಾದಿಗಳ್ಯಾವುವೂ ಇಲ್ಲದಂಥ ಕಡೆ, ಎಲ್ಲಿ ಗಿಡಮರಗಳನ್ನು ಹೊಸದಾಗಿ ನೆಟ್ಟರೆ ಅವು ಅಭಿವೃದ್ಧಿಗೆ ಬಾರದೆ ಇರುತ್ತಿದ್ದವೋ ಅಂಥಾ ಕಡೆಗಳಲ್ಲಿ ಮಾತ್ರವೇ ಕೊಡಲಾಗಿದೆ. ಹೀಗೆ ಕೆಲಕೆಲವು ಸಂದರ್ಭಗಳಲ್ಲಿ ಎಲ್ಲಿ ಅಂಥಾ ಭೂಮಿಯಿಂದ ಅರಣ್ಯ ಇಲಾಖೆಗೆ ಯಾವ ಪ್ರಯೋಜನವೂ ಇರುವುದಿಲ್ಲವೆಂದು ಕಂಡುಬಂದಿದ್ದಂಥವುಗಳನ್ನು ಕೊಡಲೇಬೇಕೆಂಬ ಒತ್ತಾಯ ಬಂದು ಕೊಡಲಾಗಿದೆ.

ಇನ್ನು ಶ್ರೀಮಾನ್ ಟಿ. ಮಾದಯ್ಯಗೌಡರು ಈ ಅರಣ್ಯ ಅಭಿವೃದ್ಧಿಯ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು, ಈ ಕಾರ್ಯವನ್ನು ಮಾಡತಕ್ಕದ್ದು ಸೂಕ್ತವಾಗಿರುತ್ತೆಂದು ಸೂಚಿಸಿದ್ದಾರೆ. ಆದರೆ ಅರಣ್ಯ ಇಲಾಖೆಯವರು ಈ ದಿವಸ ಕೂಡ ಅಂಥಾ ಒಂದು ನಿರ್ದಿಷ್ಟವಾದ ಯೋಜನೆಯ ಪ್ರಕಾರ ಗಿಡಮರಗಳನ್ನು ಬೆಳೆಸುತ್ತಿದ್ದಾರೆಯೇ ವಿನಾ ಶ್ವೇಚ್ಛಾ ರೀತಿಯಲ್ಲೇನೂ ಮಾಡುತ್ತಿಲ್ಲ. ಈ ಇಲಾಖೆಯಲ್ಲಿರತಕ್ಕ ಅನೇಕ ಅಧಿಕಾರಿಗಳು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಹೋಗಿ ಅಲ್ಲಿ ಈ ಅರಣ್ಯ ಸಂಪತ್ತನ್ನು ಹೇಗೆ ಹೆಚ್ಚಿಸಬೇಕು, ಹೇಗೆ ಇದನ್ನು ಅಭಿವೃದ್ಧಿಪಡಿಸಬೇಕು ಎಂಬ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡು ಬಂದು, ಆ ಪ್ರಕಾರ ಅವರೆಲ್ಲರೂ ಇಲ್ಲಿ ಕೆಲಸ ನಡೆಸುತ್ತಿದ್ದಾರೆ.

ಮೊಳಕಾಲ್ಮುರುವಿಗೆ ಹೋಗುವ ದಾರಿಯಲ್ಲಿ ಅನೇಕ ಮರಗಳು ಬಹು ಚೆನ್ನಾಗಿದ್ದುವು. ಅವುಗಳಲ್ಲಿ ಈಗ ಒಂದೂ ಕಾಣುವುದಿಲ್ಲ ಎಂದು ಶ್ರೀ ಗೋವಿಂದರೆಡ್ಡಿಯವರು ಹೇಳಿದರು. ಅದು ವಾಸ್ತವವಾದ ವಿಚಾರ. ನಾನು ಆಕಡೆ ಹೋಗಿದ್ದಾಗಲೂ ಕೆಲವು ಮರಗಳನ್ನು ಕಡಿದಿದ್ದರು. ಇದ್ದಲಿಗಾಗಿ ಕೆಲವು ಮರ ಕಡಿದಿದ್ದಾರೆ. ಕೆಲವು ಕಡೆ ಕಳ್ಳತನ ನಡೆಯುತ್ತಿತ್ತು. ಬಹಳಮಟ್ಟಿಗೆ ಅದನ್ನು ಈಗ ನಿಲ್ಲಿಸಲಾಗಿದೆ. ಅದೇ ರೀತಿಯಲ್ಲಿ ಬೆಂಗಳೂರು ಸಿಟಿ, ಮೈಸೂರು ಸಿಟಿ ಮುಂತಾದ ಅನೇಕ ಪಟ್ಟಣಗಳಲ್ಲಿ ಸೌದೆ ಮತ್ತು ಇದ್ದಲನ್ನು ಒದಗಿಸುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಚಿತ್ರದುರ್ಗಕ್ಕೆ ಸೌದೆ ಒದಗಿಸಲು ಸುತ್ತಲೂ ಇದ್ದ ಅರಣ್ಯ ಹಾಳಾಗುತ್ತಿತ್ತು. ನಾನು ಅಲ್ಲಿಗೆ ಹೋದಾಗ ನೂರಾರು ಜನರು ಸೌದೆ ತರುತ್ತಿದ್ದರು, ತಲೆಹೊರೆ ಸೌದೆ ತರುವುದು ಆಕಡೆ ಜಾಸ್ತಿ. 2—3 ಮೈಲಿ ಪ್ರದೇಶ ಕಾಡೇ ಇಲ್ಲದಂತಾಗಿದೆ. ಅರಣ್ಯ ಇಲಾಖಾ ಅಧಿಕಾರಿಗಳನ್ನು ಕೇಳಲು ಅನೇಕರಿಗೆ ಅದರಿಂದಲೇ ಜೀವನ, ಇಲ್ಲದಿದ್ದರೆ ಬಹಳ ಕಷ್ಟ, ಚಿತ್ರದುರ್ಗಕ್ಕೆ ಅಲ್ಲಿ ಬಿಟ್ಟರೆ ಸೌದೆಗೆ ಬೇರೆ ಅವಕಾಶವಿಲ್ಲ ಎಂದು ತಿಳಿಸಿದರು. ಆದ್ದರಿಂದ ಕ್ರಮೇಣ ಸೌದೆಗೆ ಲೈಸೆನ್ಸ್ ಕೊಡುವುದನ್ನು ಕಡಮೆ ಮಾಡಿ ಎಂದು ಹೇಳಿದ ಮೇಲೆ ಸ್ವಲ್ಪ ಮರ ಕಡಿಯುವುದು ಕಡಿಮೆಯಾಗುತ್ತಿದೆ.

ಅರಣ್ಯ ಇಲಾಖೆ ಉತ್ಪತ್ತಿ ಕಡಿಮೆಯಾಗುತ್ತಿದೆಯೆಂದು ಜನಾಬ್ ಸೈಯದ್ ಅಬ್ದುರ್ ರಹಮಾನ್‌ರವರು ಹೇಳಿದರು. ಹಣಕಾಸಿನ ಇಲಾಖೆ ಮೆಮೊರ್ಯಾಂಡಂ ನೋಡಿದರೆ 1937ರಿಂದ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಆದಾಯ ಕ್ರಮ ಕ್ರಮವಾಗಿ ಹೆಚ್ಚುತ್ತಿದೆ ಎಂಬುದು ಅವರಿಗೇ ಗೊತ್ತಾಗುತ್ತದೆ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಗಂಧದ ಮರದ ಉತ್ಪತ್ತಿಯೂ ಅದರಲ್ಲಿ ಸೇರಿದೆಯೇ?

ಮಾನ್ಯ ಶ್ರೀ ಆರ್. ಚನ್ನಿಗರಾಮಯ್ಯನವರು.—ಅದು ಸೇರಿಲ್ಲ. ಒಂದು ಕೋಟಿ 11 ಲಕ್ಷದಲ್ಲಿ, 62 ಲಕ್ಷ

83 ಸಾವಿರ ರೂಪಾಯಿಗಳು ಮಾತ್ರ ಗಂಧದ ಮರದಿಂದ ಬಂದಿದೆ.

ಶ್ರೀ ಜಿ. ಎ. ಆಚಾರ್ಯರು.—ಗಂಧದ ಮರ ಹೆಚ್ಚಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೆಚ್ಚಿದೆ. ಗಂಧದ ಮರಗಳಿಗೆ ಒಂದು ಖಾಯಿಲೆ ಬಂದಿತ್ತು. ಅದಕ್ಕೆ ಮದ್ರಾಸು ಸರ್ಕಾರದವರೂ ಮತ್ತು ನಮ್ಮ ಸರ್ಕಾರದವರೂ ಸೇರಿ ಪರಿಹಾರವನ್ನು ಕಂಡುಹಿಡಿಯಬೇಕೆಂದು ಪ್ರಯತ್ನ ಮಾಡಲಾಯಿತು. ಈಗ ಸ್ವಲ್ಪ ಉತ್ತಮವಾಗಿದೆ. ಈ ರೀತಿಯಾಗಿ ಅರಣ್ಯ ಇಲಾಖೆಯವರು ಸರ್ವಪ್ರಯತ್ನವನ್ನೂ ಮಾಡುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಕೆಲವು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರ್ವಪ್ರಯತ್ನವನ್ನೂ ಮಾಡಿ ಅರಣ್ಯ ಇಲಾಖೆಯನ್ನು ಅಭಿವೃದ್ಧಿಪಡಿಸಲು ಆದಷ್ಟು ಕಾರ್ಯಕ್ರಮ ಕೈಗೊಳ್ಳುತ್ತೇವೆ.

Janab SYED ABDUR RAHMAN.—The Hon'ble Finance Minister, when he was in charge of the Forest portfolio, made a promise to this House that for every tree cut, he would be going to have two trees planted. Has that policy been followed! What happend to "Vanamahotsava"?

The Hon'ble Sri R. CHENNIGARAMIAH.—It has been followed. But it is impossible to find out how many trees have been cut and how many trees have been planted. But that policy any way has been pursued.

ಶ್ರೀ ಜಿ. ಎ. ಆಚಾರ್ಯರು.—ಗಂಧದ ಮರಗಳಿಗೆ ಖಾಯಿಲೆ ಇದೆ ಎಂದು ಹೇಳಿದಿರಿ. ಅದಕ್ಕೆ ರಿಸರ್ಚ್ ಮಾಡುವುದಕ್ಕೆ ಹಣ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಣವಿದೆ. ತಜ್ಞರ (experts) ಸಮಿತಿಯನ್ನು ಏರ್ಪಡಿಸಿದ್ದೇವೆ. ಮದ್ರಾಸಿನ ಅರಣ್ಯ ಇಲಾಖೆಯವರನ್ನು ಕೇಳಲು ಅವರು ಸಹಕಾರ ನೀಡಲಿಲ್ಲ. ಆದ್ದರಿಂದ ನಮ್ಮ ಇಲಾಖೆಯಲ್ಲಿರುವ ಕೆಲವು ಸ್ಪೆಷಲಿಸ್ಟ್‌ಗಳೇ ಸ್ವತಂತ್ರವಾಗಿ ರಿಸರ್ಚ್ ಮಾಡುತ್ತಿದ್ದಾರೆ.

Janab SYED ABDUR RAHMAN.—I beg leave of the House to withdraw the cut motion.

The cut motion was, by leave of the House, withdrawn.

Appointment of a Committee to go into the question of abolishing the contract system regarding Thangadi and other barks.

Sri T. HANUMIAH (Chitaldrug District-Depressed Class).—Sir, I beg to move.

"That the demand under the head "10 Forests" for Rs. 37,66,000 be reduced by Rs. 100 (to urge the Government to remove the contract system relating to Thangadi and other barks, and to appoint a committee to go into the question)".

ಮಾನ್ಯ ಅಧ್ಯಕ್ಷರೇ, ಈ ಚಕ್ಕೆ ಕಂಟ್ರಾಕ್ಟು ಎಂಬುದು ಬಹಳ ಕಾಲದಿಂದಲೂ ಬಂದಿದೆ ಎಂದು ನಾನು ಹೇಳಬೇಕಾಗಿದೆ. ಇದನ್ನು ಸರ್ಕಾರದವರೇ ಕೊಡುವುದರಿಂದ ಎಷ್ಟೋ ತೊಂದರೆಯಾಗಿದೆ ಎಂದು ಅನೇಕ ಮಾನ್ಯ ಸದಸ್ಯರು ನ್ಯಾಯವಿಧಾಯಕ ಸಭೆಯಲ್ಲೂ ಮತ್ತು ಪ್ರಜಾಪ್ರತಿನಿಧಿ ಸಭೆಯಲ್ಲೂ ಹಿಂದೆ ಹೇಳಿರುವುದು ಎಲ್ಲರಿಗೂ ಗೊತ್ತೇ ಇದೆ. ಈ ಚಕ್ಕೆ ಕಂಟ್ರಾಕ್ಟು ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಶಿವಮೊಗ್ಗ ಮತ್ತು ಇತರ ಜಿಲ್ಲೆಗಳಲ್ಲಿ ಕೊಂಚ ಕೊಂಚ ಇದೆ. ಸರ್ಕಾರದವರು ಒಂದೊಂದು ಜಿಲ್ಲೆಯಲ್ಲೂ ಚಕ್ಕೆ ಕಂಟ್ರಾಕ್ಟನ್ನು ಹರಾಜು ಮಾಡಿ ಒಬ್ಬೊಬ್ಬ ಕಂಟ್ರಾಕ್ಟರಿಗೆ ಕೊಟ್ಟು ಅದರಿಂದ ಬರುವ ಹಣವನ್ನು ತೆಗೆದುಕೊಂಡು ಚಕ್ಕೆಯನ್ನು ತೆಗೆದುಕೊಳ್ಳುವ ಹಕ್ಕನ್ನು ಕೊಡುತ್ತಾರೆ. ಆ ಮೇಲೆ ಆ ಕಂಟ್ರಾಕ್ಟುದಾರರು ತಾಲ್ಲೂಕುಗಳನ್ನು ಒಂದೊಂದು ಯೂನಿಟ್ಟನ್ನಾಗಿ ಮಾಡಿ ಬೇರೆಯವರಿಗೆ ಕೊಡುತ್ತಾರೆ. ಅಲ್ಲಿಂದ ಹೋಬಳಿಗಳಲ್ಲಿರುವ ಸಣ್ಣ ಸಣ್ಣ ಕಂಟ್ರಾಕ್ಟುದಾರರಿಗೆ ತಾಲ್ಲೂಕಿನಲ್ಲಿರುವ ಕಂಟ್ರಾಕ್ಟರುಗಳು ಆ ಹಕ್ಕನ್ನು ಕೊಡುತ್ತಾರೆ, ಗ್ರಾಮಾಂತರಗಳಲ್ಲಿ ಚಕ್ಕೆ ಕಂಟ್ರಾಕ್ಟರುದಾರರು ಕೂಡಿಹಾಕಿರುವ ಚಕ್ಕೆಯನ್ನು ನೂರು ಪೌಂಡು ಚಕ್ಕೆಗೆ ಸುಮಾರು $1\frac{1}{2}$ ಯಿಂದ 2 ರೂಪಾಯಿವರೆಗೆ ಕೊಡುತ್ತಾರೆ. ಅದೇ ಹೊರಗಡೆ ಚಕ್ಕೆಯನ್ನು ವಾಣಿಯಂಬಾಡಿ, ವೇಲೂರು, ಮದ್ರಾಸು ಮುಂತಾದ ಕಡೆಗಳಲ್ಲಿ ನೂರು ಪೌಂಡಿಗೆ 25ರಿಂದ 30 ರೂಪಾಯಿಗಳವರೆಗೂ ಮಾರಾಟ ಮಾಡುತ್ತಾರೆ. ಹಿಂದೆ ಆಫ್ರಿಕಾದಿಂದ ವಾಟಲ್ ಬಾರ್ಕ್ ಬರುವಾಗ ಈ ಚೆಕ್ಕೆಗೆ ದರ ಹೆಚ್ಚಿರಲಿಲ್ಲ. ಆಫ್ರಿಕಾದಿಂದ ವಾಟಲ್ ಬಾರ್ಕ್ ಬರುವುದು ನಿಂತ ಮೇಲೆ ಇಲ್ಲಿ ದರ ಬಹಳ ಹೆಚ್ಚಿದೆ. ಗ್ರಾಮಾಂತರಗಳಲ್ಲಿ ಕಂಟ್ರಾಕ್ಟರುಗಳು ಅವಿದ್ಯಾವಂತರಾಗಿರುವ ನಿಮ್ಮ ವರ್ಗದವರ ಬಳಿಗೆ ಹೋಗಿ ಬಹಳ ತೊಂದರೆ ಕೊಡುತ್ತಾರೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಗ್ರಾಮಕೈಗಾರಿಕೆಗಳಲ್ಲೊಂದಾದ ಚರ್ಮಹದ ಮಾಡುವುದಕ್ಕೆ ಕೂಡ ತೊಂದರೆ ಕೊಟ್ಟು ಅವರನ್ನು ನಿರ್ಬಂಧವಾಗಿ ಚಕ್ಕೆ ಜಮಾಯಿಸಲು ಕೂಲಿ ಕೊಟ್ಟು ಕರೆದುಕೊಂಡು ಹೋಗುತ್ತಾರೆ. 100 ಪೌಂಡು ಚಕ್ಕೆ ಜಮಾವಣೆ ಮಾಡಿದರೆ $1\frac{1}{2}$ ಯಿಂದ 2 ರೂಪಾಯಿವರೆಗೆ ಕೊಡುತ್ತಾರೆಂದು ಈ ರೀತಿ ಮಾಡುತ್ತಿದ್ದಾರೆ. ಆದರೆ ಜಮಾಯಿಸಲು ಸುಮಾರು $1\frac{1}{2}$ ಅಣೆ ದಿನಗೂಲಿ ಕೂಡ ಸಿಕ್ಕುವುದಿಲ್ಲ ಎಂದು ಸರ್ಕಾರಕ್ಕೆ ತಿಳಿಸಬೇಕಾಗಿದೆ. ಆದ್ದರಿಂದ ಹಿಂದಿನ ಸರ್ಕಾರದವರು ಯಾವುದೋ ಒಂದು ಕಾರಣದಿಂದ ಚಕ್ಕೆ ಕಂಟ್ರಾಕ್ಟ್ ವಿಚಾರದಲ್ಲಿ ಅನುಸರಿಸಿರುವ ನೀತಿಯನ್ನೇ ಈಗಿನ ಸರ್ಕಾರದವರೂ ಕೂಡ ಅನುಸರಿಸಿಕೊಂಡು ಬರತ್ತಿರುವುದು ಸರಿಯಾದ ಮಾರ್ಗವಲ್ಲ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ವಿಚಾರವು ಪದೆ ಪದೇ ಈ ಸಭೆಯ ಮುಂದೆ ಪ್ರಶ್ನೆ ರೂಪವಾಗಿಯಾಗಲಿ ಅಥವಾ ನಿರ್ಣಯದ ರೂಪವಾಗಿಯಾಗಿ ಬರುತ್ತಲೇ ಇದೆ. ಇದರಲ್ಲಿ ನಿಜವಾಗಿಯೂ ಮಧ್ಯಸ್ತಗಾರರಿಗೆ ಹೆಚ್ಚು ಹಣ ಹೋಗುತ್ತಿದೆಯೇ ಹೊರತು ಅಲ್ಲಲ್ಲಿ ಕಷ್ಟಪಟ್ಟು ದುಡಿಯುವ ಮನುಷ್ಯರಿಗೆ ಯಾವ ಪ್ರತಿಫಲವೂ ಸಿಕ್ಕುತ್ತಿಲ್ಲ.

ಆದ್ದರಿಂದ ಈ ಪ್ರತಿಫಲ ನಿಜವಾಗಿಯೂ ಯಾರು ದುಡಿಯುತ್ತಾರೋ ಅವರಿಗೆ ಸಿಕ್ಕಬೇಕಾದ್ದು ನ್ಯಾಯ

(SRI T. HANUMIAH.)

ವಾಗಿದೆ ಎಂದು ಹೇಳಬೇಕಾಗಿದೆ. ಈ ಕಾಂಟ್ರಾಕ್ಟ್ ಸಿಸ್ಟಂಗೆ ಕೊಡುವುದರಿಂದ ಸರ್ಕಾರದವರಿಗೆ ಸುಮಾರು 5 ಲಕ್ಷ ರೂಪಾಯಿ ಮಾತ್ರ ಆದಾಯ ಬರುತ್ತದೆ. ಇದು ಬಹಳ ಹೆಚ್ಚೇನೂ ಅಲ್ಲವೆಂದು ಹೇಳುತ್ತೇನೆ. ಡಿಕೆಂದರೆ 5 ಲಕ್ಷ ರೂಪಾಯಿಗೆ ತೆಗೆದುಕೊಂಡು ಕಂಟ್ರಾಕ್ಟುದಾರರು ಸುಮಾರು 50–60 ಲಕ್ಷ ರೂಪಾಯಿ ವಹಿವಾಟ ನಡೆಸುತ್ತಾರೆ. 100 ಪೌಂಡ್ ಚಕ್ಕೆಗೆ 2 ರೂಪಾಯಿನಂತೆ ತೆಗೆದುಕೊಂಡು 30—40 ರೂಪಾಯಿಗೆ ಮಾರಿದರೆ ಎಷ್ಟು ಲಾಭ ಬರುತ್ತದೆ ಎಂಬುದನ್ನು ಸರ್ಕಾರದವರೇ ತಿಳಿದುಕೊಳ್ಳಬೇಕಾದ್ದು ಅವರ ಮುಖ್ಯ ಕರ್ತವ್ಯವಾಗಿದೆ ಎಂದು ಪ್ರಾರ್ಥಿಸುತ್ತೇನೆ.

ಸ್ವಾಮಿ, ಈ ಕಾಂಟ್ರಾಕ್ಟ್ ಪದ್ಧತಿ ಬಹಳ ಕಾಲದಿಂದಲೂ ನಡೆದುಕೊಂಡು ಬಂದಿರುವುದರಿಂದ ಈ ಪದ್ಧತಿಯನ್ನು ಬದಲಾಯಿಸಿ ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಬೇಕಾದ್ದು ಅಗತ್ಯ. ಗ್ರಾಮಾಂತರಗಳಲ್ಲಿ ಇದು ಒಂದು ಕೈಗಾರಿಕೆ ಇದ್ದ ಹಾಗೆ. ಮೊನ್ನೆ ನಂಜನಗೂಡಿನಲ್ಲಿ ಭೀಮಪ್ಪನಾಯಕರ ಅಧ್ಯಕ್ಷತೆಯಲ್ಲಿ ಒಂದು ಕೋ-ಅಪರೇಟಿವ್ ಕಾನ್‌ಫರೆನ್ಸ್ ನಡೆದಾಗ ಈ ವಿಷಯದಲ್ಲಿ ಅವರು ಸಲಹೆ ಕೊಟ್ಟಿದ್ದಾರೆ. ಆದ್ದರಿಂದ ಮುಖ್ಯವಾಗಿ ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಇಡೀ ಮೈಸೂರು ದೇಶದ ಚಕ್ಕೆ ಕಂಟ್ರಾಕ್ಟು ಯಾವ ಯಾವ ಡಿಸ್ಟ್ರಿಕ್ಟನಲ್ಲಿ ನಡೆಯುತ್ತಿದೆಯೋ ಅದನ್ನೆಲ್ಲಾ ತಿಳಿದುಕೊಳ್ಳಲು ಒಂದು ಸಮಿತಿ ಬಹಳ ಅಗತ್ಯವಾಗಿದೆ. ಅವರು ಅಲ್ಲಿಗೆಲ್ಲಾ ಹೋಗಿ ಚಕ್ಕೆ ಕಂಟ್ರಾಕ್ಟುದಾರರು ಮತ್ತು ಕೆಲಸ ಮಾಡತಕ್ಕ ಕೂಲಿಗಳನ್ನು ವಿಚಾರಿಸಿ ಯಾವ ರೀತಿ ಮಾಡಿದರೆ ನಿಜವಾಗಿಯೂ ಕೆಲಸ ಮಾಡತಕ್ಕವನಿಗೆ ಒಂದು ಪ್ರತಿಫಲ ದೊರಕುತ್ತದೆ ಎಂಬುದನ್ನು ಪರಿಶೀಲಿಸಿ ಸಲಹೆ ಮಾಡಬೇಕೆಂಬ ಉದ್ದೇಶದಿಂದ ಈ ಖೋತಾ ನಿರ್ಣಯವನ್ನು ಸಭೆಯ ಮುಂದೆ ತಂದಿದ್ದೇನೆಯೇ ಹೊರತು ಇನ್ನಾವ ಉದ್ದೇಶವೂ ಇಲ್ಲ. ಮಾನ್ಯ ಮಂತ್ರಿಗಳಿಗೆ ಈ ವಿಷಯದಲ್ಲಿ ಹೆಚ್ಚಾಗಿ ತಿಳಿದಿದೆ ಎಂದು ನಾನು ಹೇಳಬೇಕಾಗಿದೆ. ಮುಖ್ಯವಾಗಿ ಈ ಸಮಿತಿಯನ್ನು ಮಾಡಬೇಕಾದ್ದು ಆಗತ್ಯವೆಂದು ಹೇಳಿ ಈ ಖೋತಾ ನಿರ್ಣಯವನ್ನು ಮಂಡಿಸುತ್ತೇನೆ.

Mr. SPEAKER.—Cut motion moved :

"That the demand be reduced by Rs. 100"

* **Sri A. BHEEMAPPA NAIK** (Chitaldrug District—General).—Mr. Speaker, Sir, I wish to accord my support to this cut motion. This is a minor forest produce. by selling which the Government derive a large income. It is not the intention of the mover of this cut motion to reduce the income of the Government in any way. All that he wants is that the system by which the income is derived at present be changed and that the man actually working on the thangadi bark should be made to get the benefit by removing the middle man. What is happening at present is the right of collecting thangadi bark produce is being auctioned every year by taluks. The right is being purchased by the auction purchasers for two years. They sub-lease the contract and convert it into mandies and hoblies These persons in turn go and advance some monies to poor Harijans in villages for collecting the bark. For the interest alone they will have to go on taking out these barks and giving them to these persons. The principal will thus remain always undischarged and it is handed over from contractor to contractor. That has been the position for all these two years. The poor Harijans are made to work every morning and evening at least for two years. This is a by-industry for the agriculturist or for any other person and it is specially a Harijan or Lambani that has taken to this. A different arrangement should be made for the sale of the bark on co-operative lines. That is what I have suggested as Chairman of the Cottage Industries Committee. Supposing one lakh of bales of thangadi bark is produced in Mysore State. Levy a tax of one rupee on each bale. This can be stored anywhere and everywhere and any person is free to collect all this bark and it will have to be exported by train alone either to Madras or any other place because the tanners are few and far between so that it can very easily be evaluated. When he takes or sells it levy some tax calculated on a fair basis on the total return or on the quantity of bark that is produced in Mysore State. In that case there is no necessity for auctioning the collection. The actual worker goes, collects and converts it into bark and when he sells it or exports it, he or the man who finally exports will have to pay certain centage or tax on that; thereby Government will not be a loser, the actual worker will be benefitted and the middleman is eliminated. In fact the actual workers have known that the middleman is duping them terribly.

*Speech not revised of the Hon'ble Member.

The Hon'ble Member Sri Hanumiah who moved this cut motion has brought to the notice of Government how much profit the middleman is making. These workers say that they are not going to work in the existing State of affairs. They have stopped work and the middlemen are now in a fix. Perhaps they will approach the Government for rebate saying that the old workers have not worked well. All these difficulties can be and will be eliminated by levying a certain tax on the minor forest produce when it is exported. That would be a better method. Or any other method may be suggested by the committee going into details of this question by examining the workers, and the middlemen in the areas where this is vastly in vogue as well as the Forest Department, and this would certainly go a long way in mitigating the hardships of the poor harijans. In fact the speedier remedy is as suggested last time: if instead of auctioning talukwar it is auctioned Mandiwar the workers would be benefited. It is only people from Bangalore and other parts, very rich people, that go and bid because the sum is very heavy. If by taluks it is auctioned no poor man can go and bid. Instead of it if two mandies or four or five villages are auctioned, the workers will be benefited. Even that has to be considered. From all points of view I welcome the suggestion of Sri T. Hanumiah and I hope the Hon'ble Minister will certainly consider the question very favourably. It does not need much elaboration and I heartily support the cut motion.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಧ್ಯಕ್ಷರೇ, ಈ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳಬೇಕಾದ್ದಿಲ್ಲ. ಈ ತಂಗಡಿ ಚಕ್ಕೆಯನ್ನು ಕಂಟ್ರಾಕ್ಟ್ ಕೊಡುವ ವಿಚಾರದಲ್ಲಿ ಬಹಳ ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೇವೆ. ಆದರೂ ಬೇರೆ ಯಾವ ರೂಪದಲ್ಲಿಯೂ ಇದನ್ನು ಉತ್ತಮಪಡಿಸುವ ಮಾರ್ಗ ಇನ್ನೂ ನಮಗೆ ದೊರೆತಿಲ್ಲ. ಬೇರೆ ಕಡೆ ಸರ್ಕಾರದವರೇ ಒಂದು ಮಂಡಿಯನ್ನು ಇಟ್ಟು ಚಕ್ಕೆಯನ್ನು ಕೊಂಡುಕೊಳ್ಳುವಂತೆ ಕೆಲವು ಕಡೆ ಪ್ರಯತ್ನಪಟ್ಟು ಅದು ಸರಿಯಾಗಿ ನಡೆಯಲಿಲ್ಲವೆಂದು ನನಗೆ ವರ್ತಮಾನ ಬಂದಿದೆ. ಇಲ್ಲಿಯೂ ಸಾಮಾನ್ಯವಾಗಿ ಹಿಂದಿನ ವರ್ಷದಿಂದಲೂ ನಮ್ಮ ಇಲಾಖೆಯವರಿಂದ ಪರಿಶೀಲನೆ ಮಾಡಿಸಿ ಈ ಪದ್ಧತಿಯನ್ನು ಯಾವ ರೀತಿ ಉತ್ತಮ ಪಡಿಸಬೇಕೆಂಬುದನ್ನು ಯೋಚನೆ ಮಾಡಿದೆವು. ಆದರೆ ಒಂದು ತೊಂದರೆ ಕಂಡು ಬಂದಿದೆ. ಸರ್ಕಾರದವರೇ ಒಂದು ಡಿಪೋ ಮಾಡಬಹುದು. ಈ ತಂಗಡಿ ಚಕ್ಕೆಯನ್ನು ಶೇಖರಿಸುವವರು ಯಾರೋ ಒಬ್ಬ ಕಂಟ್ರಾಕ್ಟುದಾರನಿಗೆ ಕೊಡುವ ಬದಲು ಸರ್ಕಾರದವರಿಗೇ ಕೊಡುವಂತೆ ಮಾಡೋಣವೆಂದು ಯೋಚನೆ ಮಾಡಬಹುದು, ಆದರೆ ಈಗ ಆಹಾರದ ಡಿಪೋಗಳಲ್ಲಿ ಯಾವ ರೀತಿ ಅಲ್ಲಿನ ಗುಮಾಸ್ತರುಗಳ ಮೇಲೆ ಏನೊಂದು ದೂರುಗಳು ಕೇಳಿ ಬರುತ್ತಿವೆಯೋ ಅದೇ ರೀತಿ ಈ ಡಿಪೋಗಳಲ್ಲಿಯೂ ಮುಂದೆ ಒಂದಾನೊಂದು ದಿನ ದೂರು ಬಂದೇ ಬರುತ್ತದೆಂದು ಯೋಚನೆಯಾಗಿದೆ.

Sri A. BHEEMAPPA NAIK.—It is not a commodity to be eaten or used in any other way. It is a commodity which will exclusively go to outside Mysore. Therefore there would not be any such cases.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ವಿಚಾರವಲ್ಲ ಕಾಡಿನಿಂದ ಚಕ್ಕೆಯನ್ನು ಆರಿಸಿಕೊಂಡು ಆ ಬಡಪಾಯಿ ಡಿಪೋವಿಗೆ ತಂದು ಕೊಡಬಹುದು. ಅದನ್ನು ಅಂಗಡಿಯಲ್ಲಿ ತೆಗೆದುಕೊಳ್ಳುವವನು ಅವನಿಗೆ ಸರಿಯಾದ ತೂಕ ಕೊಡುತ್ತಾನೋ ಇಲ್ಲವೋ, ನಾಲ್ಕು ತೂಕ ತೆಗೆದು ಎರಡು ತೂಕ ಎಂದು ಹೇಳಬಹುದು. ಇದನ್ನೆಲ್ಲಾ ನೋಡಿಕೊಳ್ಳುವವರು ಯಾರು? ಪಕ್ಕವಾಗಿ ಲೆಕ್ಕಾಚಾರದ ರೀತಿಯಲ್ಲಿ ಎಲ್ಲಾ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ.

Sri A. BHEEMAPPA NAIK.—The Hon'ble Minister has not tried any one of these methods; he is only guessing and replying. He will have to try.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲೇನೋ ನಾವು ಆ ರೀತಿ ಪ್ರಯತ್ನ ಮಾಡಿ ನೋಡಿಲ್ಲ. ಮದ್ರಾಸ್‌ನಲ್ಲಿ ಮಾಡಿದ್ದಾರೆ. ಆದರೂ ಆ ವಿಚಾರಕ್ಕೆ ನಾನೀಗ ಹೋಗುವುದಿಲ್ಲ. ಈಗ ಈ ಖೋತಾ ನಿರ್ಣಯದಲ್ಲಿ ಕೇಳಿರುವುದಾದರೂ ಇಷ್ಟು. ಒಂದು ಸಮಿತಿಯನ್ನು ಏರ್ಪಾಡು ಮಾಡಿದರೆ ಅವರು ಈಗಿರುವ ಪರಿಸ್ಥಿತಿಯನ್ನು ಯೋಚನೆ ಮಾಡಿ ಸರ್ಕಾರದವರಿಗೆ ವರದಿ ಮಾಡಬಹುದೆಂದು ತಿಳಿಸಿದ್ದಾರೆ. ಅದನ್ನು ಮಾಡುವುದಾದರೆನೋ ಸರ್ಕಾರದವರಿಗೆ ಕಷ್ಟವಿಲ್ಲವೆಂದು ತೋರುತ್ತೆ. ಅದರಂತೆ ಒಂದು ಸಮಿತಿ ಮಾಡಿ ಅವರು ಎಲ್ಲಾ ವಿಚಾರಗಳನ್ನು ಪರಿಶೀಲನೆಗೆ ತೆಗೆದುಕೊಂಡು ಸರ್ಕಾರದವರಿಗೆ ಸೂಕ್ತ ಸಲಹೆಗಳನ್ನು ಕೊಡುವಂತೆ ಏರ್ಪಾಡು ಮಾಡುತ್ತೇವೆ. ಈ ಭರವಸೆಯ ಮೇಲೆ ಮಾನ್ಯ ಸದಸ್ಯರು ತಮ್ಮ ಖೋತಾ ಸೂಚನೆಯನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri T. HANUMIAH.—I beg leave of the House to withdraw the cut motion.

The cut motion was, by leave of the House, withdrawn.

———

Policy Regarding Grant of free timber to Bhadravathi Iron and Steel Works.

*Sri A. BHEEMAPPA NAIK (Chitaldrug District—General).—Sir, I beg to move:

"That the demand under the head "10. Forests" for Rs. 37,66,000 be reduced by Rs. 100 to consider the policy in the matter of granting free timber to Iron Works, Bhadravathi."

It must be fuel, Sir, it is not timber. It is a printing mistake. In my original I have said fuel.

I wish to say only this much. The Government, especially the Finance Minister, accepted that sandal wood supplied to the Sandal Wood Oil Factory must be charged though the factory is a Government concern. This is only to know whether the factory is making some profit or not. Raw materials purchased are very important factors that go into costing. Similarly, here in Bhadravathi, the Iron Works is a Government factory. They are getting fuel from the Forest Department almost for a nominal cost, cost of only the actual cutting and converting it into charcoal is charged. According to them alone, as much as one lakh twenty thousand tons of fuel are being supplied to the Iron Works at the rate of 8 or 9 rupees per ton of charcoal. I should state that the cost of the fuel is not taken into consideration at all. The profits that are being shown by the Bhadravathi Iron Works are due to their getting fuel almost free. The Forest department is deprived of its actual income. If they had sold that charcoal at Bangalore or any other place, perhaps they would have got 10 times the amount they are getting to-day. Therefore, I submit, when they supply fuel, they should take the value of it and also the cost of converting it into charcoal, taking it as a raw material. Supposing, the Bhadravathi Iron Works was a private concern? Would we have supplied fuel free to it? Certainly not. Take for instance the Match Factory. When they get something from the Forest Department, they are charged. Similarly here also the Iron Works must be charged. But now nothing is charged and no value is taken. The seigniorage is four annas per ton *i.e.*, two cart-loads of timber or fuel. That is the seigniorage.

The Hon'ble Sri H. C. DASAPPA.—So, there is.

Sri A. BHEEMAPPA NAIK.—Perhaps that is an eye-wash. Would you get it at that rate? Sri M. V. Krishnappa who happens to be a member of the Management is also a Legislator who is interested in the Forest and its preservation. He is not after all a merchant. He is just there to look after the Iron Works. It is very easy to say that you have got so much of profit because you get some material free. But it is not the actual profit. Whatever you use for the production of iron, must be paid for. Value properly the forest products that you get and take such value as others would give to the same product and evaluate it. The Forest department must be benefited and you can charge that to the Works. The Government of India would take all the iron giving the value as shown, as it is a controlled commodity. Perhaps, there was a time when the Mysore Government wanted to show that iron in Bhadravathi was being produced cheaper than elsewhere. They wanted to show it to the Government of India that they were producing it at a very cheap rate. Perhaps, if they had shown that the fuel that they purchased from the Forest Department cost them about 20 rupees per ton and if they had sold iron including the value of fuel, they could have got more money to the exchequer.

That way we will be benefited. They have just now accepted this policy of paying for the forest products and sandalwood. On the same ground, I hope the Hon'ble Minister for Forest would press on this item being added on to his income. Perhaps there may be quarrel between the Hon'ble Finance Minister and the Hon'ble Minister for Forests on this point. One may support my cut motion and the other may oppose. But any way I hope that this really valuable product must be paid for by the Iron Works.

Mr. SPEAKER.—Cut motion moved:

"That the demand be reduced by Rs. 100."

ಅವರು ಕಳುಹಿಸಿರುವುದರಲ್ಲಿ ಫ್ಯೂಯಲ್ ಎಂದಿತ್ತು, ಇಲ್ಲಿ ಟಿಂಬರ್ ಎಂದಿದೆ, ಮುದ್ರಣದ ತಪ್ಪು ಎಂದು ಮಾನ್ಯ ಸದಸ್ಯರು ಹೇಳಿದರು. ಅವರು ಕಳುಹಿಸಿರುವ ಒರಿಜಿನಲ್‌ನಲ್ಲಿಯೂ ಟಿಂಬರ್ ಎಂತಲೇ ಇದೆ.

*ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಭೀಮಪ್ಪನಾಯಕರು ನನ್ನ ವಿಚಾರದಲ್ಲಿ ಸೂಚನೆ ಮಾಡಿದ್ದರಿಂದ ಅವರಿಗೆ ನಾನು ಉತ್ತರ ಕೊಡಬೇಕಾಗಿದೆ. ಕೆಲವು ಸದಸ್ಯರ ಮನಸ್ಸಿನಲ್ಲಿ ಏನೋ ಒಂದು ಭಾವನೆ ಇರುವಂತೆ ಕಾಣುತ್ತದೆ. ಕಬ್ಬಿಣದ ಕಾರ್ಖಾನೆಯವರು ಮುಫತ್ತಾಗಿ ಅಲ್ಲಿಯ ಕಾಡಿನಲ್ಲಿ ಮರಗಳನ್ನು ಕಡಿದುಕೊಂಡು ಬರುತ್ತಿದ್ದಾರೆಂಬ ಭಾವನೆಯನ್ನಿಟ್ಟುಕೊಂಡು ಮಾತನಾಡಿದ್ದಾರೆ. ಈ ಕಬ್ಬಿಣದ ಕೈಗಾರಿಕೆ ಅಲ್ಲಿ ಪ್ರಾರಂಭವಾದುದನ್ನು ಅದರ ಚರಿತ್ರೆಯನ್ನು ಅವರು ಮನಸ್ಸಿನಲ್ಲಿಡಬೇಕು. ಆ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕಾದರೆ ಆ ಪ್ರದೇಶದಲ್ಲಿದ್ದ ಕಾಡಿನಲ್ಲಿ ಮರಗಳನ್ನು ಯಾರಾದರೂ ಕಡಿದುಕೊಂಡು ಹೋದರೆ ಗಾಡಿಗೆ ಎಂಟಾಣೆ ಕೊಡುತ್ತೇವೆ ಎಂದು ಹೇಳುತ್ತಿದ್ದರು. ಅಂತಹ ಸಂದರ್ಭದಲ್ಲಿ ವುಡ್ ಡಿಸ್ಟಿಲೇಷನ್ ಪ್ಲಾಂಟ್ ಪ್ರಾರಂಭವಾಯಿತು. ಈಗ ಚಿನ್ನದ ಗಣಿಗೆ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ, ಬಲ್ಕ್‌ಸಪ್ಲೈ ಕೊಡುವುದರಿಂದ ಯೂನಿಟ್ಟಿಗೆ ಎರಡು ಅಥವಾ ಮೂರು ಕಾಸಿನಂತೆ ಕೊಡುತ್ತಿದ್ದಾರೆ. ಆದರೆ ನಾವು ಇಲ್ಲಿ 4 ಆಣೆ ಕೊಡುತ್ತಿದ್ದೇವೆ. ಅವರಿಗೇಕೆ ಎರಡು ಮೂರು ಕಾಸಿನಂತೆ ಕೊಡುತ್ತಿದ್ದೀರೆಂದು ಕೇಳುವುದು ನ್ಯಾಯವೆ? ಅವರು ಎಷ್ಟು ಕೊಂಡುಕೊಳ್ಳುತ್ತಾರೆ ಎಂದು ನೋಡಬೇಕು. ಬಲ್ಕ್‌ಸಪ್ಲೈ ಎಷ್ಟು ಕೊಳ್ಳುತ್ತಾರೋ ಅದರ ಮೇಲೆ ಲೆಕ್ಕಾಚಾರ ಹಾಕಿ ಕೊಡುತ್ತಿದ್ದಾರೆ. ಈ ಹೊತ್ತು ಭದ್ರಾವತಿಯಲ್ಲಿ ಕಟ್ಟಿಗೆ ಕಡಿಯುವ ಸ್ಥಳವನ್ನು ಶ್ರೀಮಾನ್ ಭೀಮಪ್ಪನಾಯಕರು ನೋಡಿಲ್ಲವೆಂದು ಕಾಣುತ್ತದೆ.

Sri W. H. HANUMANTHAPPA (Bangalore District—General).—Sir, this is incorrect. The Hon'ble Member is saying that we are supplying power to K. G. F. at 2 pies. When I put a question to the Hon'ble Minister concerned he said 'no, we are giving it at 6 pies'.

Sri M. V. KRISHNAPPA.— All right. Comparatively cheaper. ಆರು ಕಾಸಿಗೂ ನಾಲ್ಕಾಣೆಗೂ ಎಷ್ಟು ವ್ಯತ್ಯಾಸವಿದೆ! ವ್ಯತ್ಯಾಸವನ್ನು ತೋರಿಸಲು ಹೇಳಿದೆ.

ಭದ್ರಾವತಿ ಕಾರ್ಖಾನೆಯವರು ಆ ಕಾಡುಗಳನ್ನೆಲ್ಲಾ ಕಡಿದು 30 ಲಾರಿಗಳನ್ನಿಟ್ಟುಕೊಂಡು ಲಕ್ಷಾಂತರ ರೂಪಾಯಿ ಖರ್ಚು ಮಾಡಿದ್ದಾರೆ. ಈಗ ಅವರು ಸೌದೆ ಕಡಿಯುತ್ತಿರುವ ಸ್ಥಳದಲ್ಲಿ ಟನ್ ಒಂದಕ್ಕೆ ಒಂದು ರೂಪಾಯಿನಂತೆ ಕೂಡ ಯಾರೂ ಬೇರೆಯವರು ಕೊಂಡುಕೊಳ್ಳುವುದಿಲ್ಲ. ಅಂತಹ ಸ್ಥಳದಿಂದ ತೆಗೆದು ಕೊಂಡು ಬರುತ್ತಿದ್ದಾರೆ. ಅವರು ಅಲ್ಲಿನ ಬೆಲೆಯನ್ನು ಗಮನಿಸದೆ ಬೆಂಗಳೂರಿನಲ್ಲಿ 30 ರೂಪಾಯಿ ಧಾರಣೆ ಇದೆ ಎಂದು ಹೇಳುವುದು ಸಮಂಜಸವಲ್ಲ. ಅಲ್ಲದೆ ಅದೇನೂ ಖಾಸಗಿ ಕಾರ್ಖಾನೆಯಲ್ಲ. ಸರ್ಕಾರಕ್ಕೆ ಸೇರಿದ್ದು, ವಿಪರೀತ ಲಾಭ ತೋರಿಸುವುದಕ್ಕಿಂತ ನ್ಯಾಯವಾಗಿರುವ ಪರಿಸ್ಥಿತಿಯನ್ನು ಜನರ ಮುಂದಿಡಬೇಕೆಂದು ಆ ಮಾನ್ಯ ಸದಸ್ಯರ ಉದ್ದೇಶವಿರಬಹುದು. ಆದರೂ ಭದ್ರಾವತಿ ಕಾರ್ಖಾನೆಯವರು ಸರ್ಕಾರಕ್ಕೆ ಎಷ್ಟು ರಿಯಾಯಿತಿ ತೋರಿಸುತ್ತಿದ್ದಾರೆಂಬುದನ್ನು ಅವರು ಗಮನಿಸಬೇಕು. ಸಾವಿರಾರು ಟನ್ ಕಬ್ಬಿಣವನ್ನು ವ್ಯವಸಾಯದ ಇಲಾಖೆಗೆ ಚೀಪ್, ಡಿಫೆಕ್ಟಿವ್ ಎಂದು ಕೊಡುತ್ತಿದ್ದಾರೆ. ಅದನ್ನೇ ಬೇರೆಯವರಿಗೆ ಕೊಟ್ಟರೆ ಅಥವ ಹರಾಜು ಮಾಡಿದರೆ ಅವರಿಗೆ ಬೇಕಾದಷ್ಟು ಹೆಚ್ಚು ಹಣ ಬರುತ್ತದೆ. ಇದು ಪ್ರತ್ಯಕ್ಷವಾದ ಸಹಾಯ. ಇನ್ನು ಪರೋಕ್ಷವಾಗಿ ಎಷ್ಟೋ ವಿಧದಲ್ಲಿ ಕಾರ್ಖಾನೆಯಿಂದ ಸರ್ಕಾರಕ್ಕೆ ಪ್ರಯೋಜನವಿದೆ.

ಶ್ರೀ ಎ. ಭೀಮಪ್ಪನಾಯಕರು.—ಆ ಕಾರ್ಖಾನೆ ಇರಬಾರದೆಂದು ಯಾರೂ ಹೇಳಿಲ್ಲ. ಅವರು ಅದು ತಮ್ಮ ಸ್ವಂತ ಎನ್ನುವ ಹಾಗೆ ಮಾತನಾಡುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸ್ವಲ್ಪ ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆಯೇ ಹೊರತು ಬಿಟ್ಟು ಕೊಡುತ್ತಿಲ್ಲ. ಅಲ್ಲಿ Coupes ನ್ನು ಹರಾಜು ಮಾಡಿದರೆ ಬೇರೆ ಯಾರೂ ಕೊಂಡುಕೊಳ್ಳುವುದಿಲ್ಲ.

Sri A. BHEEMAPPA NAIK.—I offer ten lakhs per annum for that.

